ದೆಹಲಿ ಕರ್ನಾಟಕ ಸಂಘದ

ಫೆಬ್ರವರಿ 2019 ಬೆಲೆ ರೂ. 1

# ಅಭಿಮತ



## ಮಾನವತಾವಾದಿ

## ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಅವರಿಗೆ ನಮನ

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 29 ಸಂಚಿಕೆ 5
ಫೆಬ್ರವರಿ 2019

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ

ನಾಮಾಂಕಿತ ಸದಸ್ಯರು
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

## ಸಂಪಾದಕೀಯ

# ಆಧ್ಯಾತ್ಮದ ಶಿಖರ ಸಾಧಕ

ಧಾರ್ಮಿಕ ಕಟ್ಟುಪಾಡುಗಳನ್ನು ಪಾಲಿಸುವುದೇ ದೇವರನ್ನು ಒಲಿಸುವ ಸಾಧನ ಎಂದು ಬಿಂಬಿಸುವ ಮತ್ತು ನಂಬಿಸುವ ಧರ್ಮ ಗುರುಗಳ ನಡುವೆ ಭಿನ್ನವಾಗಿ ನಿಂತವರು ನಮ್ಮ ನಾಡಿನ ಶ್ರೇಷ್ಠ ಸಂತ ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮಿಗಳು. ಮುಖ್ಯವಾಗಿ ನಿಸರ್ಗದೊಂದಿಗೆ ಸಾಮರಸ್ಯವನ್ನು ಮತ್ತು ಸಮಾಜದಲ್ಲಿ ಸೌಹಾರ್ದತೆಯನ್ನು ತರುವುದೇ ನಿಜವಾದ ಆಧ್ಯಾತ್ಮ ಎಂದು ಜಗತ್ತಿಗೆ ತೋರಿಸಿದವರು ಶಿವಕುಮಾರ ಸ್ವಾಮಿಗಳು. ಈ ಹಾದಿಯಲ್ಲಿ ಅವರು ಆಧ್ಯಾತ್ಮದ ಉತ್ತುಂಗ ಸ್ಥಿತಿಯನ್ನು ತಲುಪಿದ ಶಿಖರ ಸಾಧಕ. ಆದ್ದರಿಂದಲೇ ಸ್ವಾಮೀಜಿ 'ನಡೆದಾಡುವ ದೇವರು' ಎಂದು ಕೋಟ್ಯಾಂತರ ಜನರು ನಂಬಿದ್ದಾರೆ.

ಶೂನ್ಯದಲ್ಲಿ ಉಂಗುರವನ್ನು, ಗಾಳಿಯಿಂದ ವಿಭೂತಿಯನ್ನು ಸೃಷ್ಟಿಸುವ ಚಮತ್ಕಾರಗಳೇ ಪವಾಡ ಎಂದು ನಂಬಿಸುವ ದೇವಮಾನವರನ್ನು ಭಾರತ ಕಂಡಿದೆ. ಈ ಮೂಲಕ ನಮ್ಮ ದೇಶದ ಸಾಧು ಸನ್ಯಾಸಿಗಳ ಕಡೆಗೆ ಜಗತ್ತೇ ತಿರುಗಿ ನೋಡಿದ ಸಂದರ್ಭಗಳೂ ಇವೆ. ಆದರೆ ಶಿವಕುಮಾರ ಸ್ವಾಮಿಗಳು ತಾವು ಬದುಕಿದ ರೀತಿಯೇ ಒಂದು ಪವಾಡ ಎಂಬಂತೆ ವಿಶ್ವಕ್ಕೆ ಕಾಣಿಸಿಕೊಂಡರು. ಶಿವಣ್ಣ ಎಂಬ ಬಾಲಕ ಶಿವಕುಮಾರ ಸ್ವಾಮೀಜಿಯಾಗಿ ನಂತರ ಸಿದ್ಧಗಂಗಾ ಪೀಠದ ಅಧಿಪತಿಯಾಗಿ ಜವಾಬ್ದಾರಿಯನ್ನು ಪಡೆಯುವ ವೇಳೆ ಆ ಪ್ರದೇಶ ಗುಡ್ಡಬೆಟ್ಟಗಳ ಮಲೆ ಪ್ರದೇಶವಾಗಿತ್ತು. ಸಿದ್ಧ ಪುರುಷರ ತಪಸ್ಸು, ಯೋಗಗಳಿಗೆ ಪ್ರಶಸ್ತವಾಗಿತ್ತು. ಅಂತಹ ಪರಿಸರವನ್ನು ಲಕ್ಷಾಂತರ ಜನರು ವಿದ್ಯೆಯನ್ನು ಪಡೆದು ಬದುಕನ್ನು ಹಸನಾಗಿಸುವ ಜ್ಞಾನದೇಗುಲವಾಗಿ ಮಾಡಿದ್ದು ಈ ಕಾಲದ ಮಹಾ ಪವಾಡವಾಗಿದೆ.

ಹನ್ನೆರಡನೇ ಶತಮಾನದ ಕಲ್ಯಾಣದ ಕ್ರಾಂತಿಯು ಭಕ್ತಿಯೋಗದೊಂದಿಗೆ ವೈಚಾರಿಕ ಕ್ರಾಂತಿಯನ್ನು ತಂದಿತು. ಅನುಭವ ಮಂಟಪವು ಜ್ಞಾನಕ್ಕೆ ಒತ್ತು ನೀಡಿ ಸಮಾಜವನ್ನು ಸುಶಿಕ್ಷಿತಗೊಳಿಸುವ ಕೇಂದ್ರವಾಗಿತ್ತು. ಬಸವಣ್ಣನವರ ಅಂದಿನ ಆಶಯವನ್ನು ನಮ್ಮ ಕಾಲದಲ್ಲಿ ಅನುಷ್ಠಾನಗೊಳಿಸಿದವರು ಡಾ. ಶಿವಕುಮಾರ ಸ್ವಾಮೀಜಿ. ಈ ಕಾರಣದಿಂದ ಅವರನ್ನು 'ಅಭಿನವ ಬಸವಣ್ಣ' ಎಂದು ಕರೆದಿರುವುದು ಅತ್ಯಂತ ಯೋಗ್ಯವಾಗಿದೆ.

ಯುಗಪುರುಷರು ಅಗಲಿದಾಗ ಅದನ್ನು ಒಂದು ಯುಗಾಂತ್ಯ ಎಂದು ಭಾವಿಸುತ್ತೇವೆ. ಆದರೆ ಶಿವಕುಮಾರ ಸ್ವಾಮಿಗಳ ಭೌತಿಕ ಶರೀರದ ಅಗಲುವಿಕೆಯನ್ನು ಅಂತ್ಯವೆಂದು ತಿಳಿಯಲಾಗದು. ಅನ್ನ ಮತ್ತು ಅರಿವಿನ ಮೂಲಕ ಸಮಾಜಕ್ಕೆ ನೀಡಿದ ಅವರ ಕೊಡುಗೆಗಳು ಜೀವಂತವಾಗಿದೆ. ಹೀಗೆ ಇರುವ ಅವರ ಸೃಷ್ಟಿ ಕಾರ್ಯಗಳು ಭಿನ್ನ ಭಿನ್ನ ರೂಪಗಳಲ್ಲಿ ಮನುಕುಲವನ್ನು ಸದಾ ಕಾಲ ಕಾಪಾಡುತ್ತದೆ ಎಂಬ ಅಚಲ ವಿಶ್ವಾಸ ನಮಗಿದೆ. ಅಧ್ಯಾತ್ಮದ ಶಿಖರ ಸಾಧಕ ಡಾ. ಶಿವಕುಮಾರ ಸ್ವಾಮೀಜಿ ಅವರಿಗೆ ನಮ್ಮ ಶ್ರದ್ಧಾಪೂರ್ವಕ ನಮನಗಳು.

*ಡಾ. ಅವನೀಂದ್ರನಾಥ್ ರಾವ್*



ದೆಹಲಿ ಕರ್ನಾಟಕ ಸಂಘದ ಸುಸಜ್ಜಿತವಾದ ಆರ್ಟ್ ಗ್ಯಾಲರಿ ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ. ಹೆಚ್ಚಿನ ಮಾಹಿತಿಗಾಗಿ ದೆಹಲಿ ಕರ್ನಾಟಕ ಸಂಘದ ಕಾರ್ಯಾಲಯವನ್ನು ಸಂಪರ್ಕಿಸಿ.
ಫೋನ್ :
011–26109615 / 26104818

## ಮುನ್ನೋಟ

ಆತ್ಮೀಯ ದೆಹಲಿ ಕರ್ನಾಟಕ ಸಂಘದ ಸದಸ್ಯರುಗಳೇ, ಹೊಸ ವರ್ಷದ ಶುಭಾಶಯಗಳೊಂದಿಗೆ ಹೊಸ ಕಾರ್ಯಕಾರಿ ಸಮಿತಿಯು ಆಯ್ಕೆಯಾಗಿದೆ. ಮತದಾನ ನೀಡಿ ಸೂಕ್ತ ಅಭ್ಯರ್ಥಿಗಳನ್ನು ಆಯ್ಕೆ ಮಾಡಿದ ಸರ್ವ ಸದಸ್ಯರಿಗೆ ಧನ್ಯವಾದಗಳು.

ಕಳೆದ ಕಾರ್ಯಕಾರಿ ಸಮಿತಿ ಕಾರ್ಯಗಳನ್ನು ತಾವು ನೋಡಿದ್ದೀರಿ ಮತ್ತು ಸಲಹೆಗಳನ್ನು ಸಹ ನೀಡಿದ್ದೀರಿ. ಈ ಬಾರಿಯೂ ನೂತನ ಕಾರ್ಯಕಾರಿ ಸಮಿತಿಗೆ ತಮ್ಮ ಸಲಹೆ, ಮಾರ್ಗದರ್ಶನ ಮುಖ್ಯ. ಆದ್ದರಿಂದ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಭಾಗವಹಿಸಿ.

ನಮ್ಮ ಕರ್ನಾಟಕದ ಶತಾಯುಷಿ ಶ್ರೀಶ್ರೀಶ್ರೀ ಸಿದ್ದಗಂಗಾ ಶ್ರೀಗಳು ನಮ್ಮನ್ನು ಅಗಲಿದ್ದಾರೆ. ಪದ್ಮಭೂಷಣ, ಕರ್ನಾಟಕ ರತ್ನ ಪಡೆದು, ಯಾವುದೇ ಒಂದು ಪ್ರಶಸ್ತಿಗೆ ಆಶಿಸದೆ ಬಂದಿರುವ ಈ ಪ್ರಶಸ್ತಿಗಳು ಅವರಿಗೆ ಕಡಿಮೆಯೇ ಸರಿ. ಭಾರತ ರತ್ನ ಲಭಿಸಲಿ ಎಂಬುದು ನಮ್ಮ ಕರ್ನಾಟಕದ ಭಕ್ತರ ಬೇಡಿಕೆ. ನನ್ನ ಅಭಿಪ್ರಾಯ ಶ್ರೀ ಶಿವಕುಮಾರ ಸ್ವಾಮೀಜಿಗಳು 'ವಿಶ್ವರತ್ನ'. ಎಲ್ಲರ ಮನದಲ್ಲಿ ಭಕ್ತಿಯಿಂದ ಕಾಣುವ ನಾವು ದೆಹಲಿ ಕರ್ನಾಟಕ ಸಂಘದಲ್ಲಿ ಮುಂಬರುವ ದಿನಗಳಲ್ಲಿ ಅವರಿಗೆ ಶ್ರದ್ಧಾಂಜಲಿ ಭಕ್ತಿ ನಮನ ಕಾರ್ಯಕ್ರಮವನ್ನು ಆಯೋಜಿಸುವ ಪ್ರಯತ್ನದಲ್ಲಿದ್ದೇವೆ. ತಾವುಗಳು ಬನ್ನಿ. ಲಕ್ಷಾಂತರ ಜನರಿಗೆ ಅನ್ನದಾನ ಮತ್ತು ವಿದ್ಯಾದಾನ ಮಾಡಿದ ಶ್ರೀಗಳಿಗೆ ಶ್ರದ್ಧಾಂಜಲಿ ನೀಡುವ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ವೈದ್ಯಕೀಯ ಸಲಹೆಗಳು

**ಡಾ. ನಿರಂಜನ್ ನಾಯ್ಕ್, MBBS, MS (AIIMS), ONCO-SURGERY (IRCH, AIIMS)** ಅವರಿಂದ ಕ್ಯಾನ್ಸರ್ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಫೆಬ್ರವರಿ, 2019ರಂದು ಬೆಳಿಗ್ಗೆ 10 ಗಂಟೆಯಿಂದ.

**ಡಾ. ಸಾಯಿಪ್ರಶಾಂತಿ ಶೆಟ್ಟಿ B.A.M.S., Msc, Yoga Therapy** ಅವರಿಂದ ಆಯುರ್ವೇದ ಮತ್ತು ಯೋಗ ಸಂಬಂಧಿತ ರೋಗಗಳಿಗೆ ಉಚಿತ ಸಲಹೆ ಭಾನುವಾರ 17 ಫೆಬ್ರವರಿ, 2019ರಂದು ಸಾಯಂಕಾಲ 4 ಗಂಟೆಯಿಂದ.

**ಡಾ. ಗುರುರಾಜ ಸಂಗೊಂದಿಮಠ MS, FNB, Spine Surgeon,** ಅವರಿಂದ ಬೆನ್ನು ಮೂಳೆಗೆ ಸಂಬಂಧಿತ ರೋಗಗಳಿಗೆ ಉಚಿತ ವೈದ್ಯಕೀಯ ಸಲಹೆ ಭಾನುವಾರ 24 ಫೆಬ್ರವರಿ, 2019ರಂದು ಬೆಳಿಗ್ಗೆ 11 ಗಂಟೆಯಿಂದ

## ಉಪನ್ಯಾಸ ಹಾಗೂ ವೈದ್ಯಕೀಯ ಸಲಹೆ



**ಡಾ. ಭೀಮ ಭಟ್**

**ಅವರಿಂದ "ವನಸ್ಪತಿಗಳ ಔಷಧೀಯ ಉಪಯೋಗ"**
**ಕುರಿತು ಉಪನ್ಯಾಸ**

ಹೋಲಿ ಫ್ಯಾಮಿಲಿ ಆಸ್ಪತ್ರೆಯ ಹಿರಿಯ ಆಯುರ್ವೇದ ವೈದ್ಯರಾದ **ಡಾ. ಭೀಮ ಭಟ್** ಅವರು ಮೂರು ದಶಕಗಳಿಂದ ಪ್ರತೀ ತಿಂಗಳ ಕೊನೆಯ ಭಾನುವಾರ ದೆಹಲಿ ಕರ್ನಾಟಕ ಸಂಘದಲ್ಲಿ ಉಚಿತ ವೈದ್ಯಕೀಯ ಸಲಹೆಯನ್ನು ನೀಡುತ್ತಾ ಬಂದಿದ್ದಾರೆ.

**ಫೆಬ್ರವರಿ 24ರ ಭಾನುವಾರ ಅಪರಾಹ್ನ 3.00 ರಿಂದ 4.30 ರವರೆಗೆ**
**ಹಾಗೂ ಸಂಜೆ : 4.30 ರಿಂದ 5.30 ರವರೆಗೆ**
**ಉಚಿತ ವೈದ್ಯಕೀಯ ಸಲಹೆಯನ್ನು** ನೀಡಲಿದ್ದಾರೆ.

ಸಂಘದ ಸದಸ್ಯರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕಾಗಿ ವಿನಂತಿ.

## ಇತರ ಸಂಘ ಸಂಸ್ಥೆಗಳ ಕಾರ್ಯಕ್ರಮಗಳು

**ಕನ್ನಡ ಅಧ್ಯಯನ ಪೀಠ, ಜವಾಹರಲಾಲ ನೆಹರೂ ವಿಶ್ವವಿದ್ಯಾಲಯ, ನವದೆಹಲಿ**

**ರನ್ನನ ಗದಾಯುದ್ಧಂ ಕೃತಿಯ ಇಂಗ್ಲಿಷ್ ಅನುವಾದ ಬಿಡುಗಡೆ**


**ಪುಸ್ತಕ ಬಿಡುಗಡೆ : ಪ್ರೊ. ವೆಂಕಟಾಚಲ ಜಿ. ಹೆಗಡೆ,** ಅಧ್ಯಕ್ಷರು, ದೆಹಲಿ ಕರ್ನಾಟಕ ಸಂಘ

**ಅನುವಾದಕರ ಮಾತು : ಪ್ರೊ. ಆರ್.ವಿ.ಎಸ್. ಸುಂದರಂ,** ಮೈಸೂರು
ಕುಮಾರಿ ಅಮ್ಮೆಲ್ ಶೆರೋನ್ , ಮಂಗಳೂರು

**ಗದಾಯುದ್ಧಂ ಗಮಕ : ಶ್ರೀ ಕೃಷ್ಣ ಕೊಲ್ಹಾರ ಕುಲಕರ್ಣಿ,** ವಿಜಯಪುರ
**ಶ್ರೀ ತೆಕ್ಕೆಕೆರೆ ಸುಬ್ರಹ್ಮಣ್ಯ ಭಟ್,** ಬೆಂಗಳೂರು

**ಗದಾಯುದ್ಧಂ ಹರಿಕತೆ : ಡಾ. ಲಕ್ಷ್ಮಣದಾಸ ಮತ್ತು ತಂಡ,** ತುಮಕೂರು

**ಗದಾಯುದ್ಧಂ ಯಕ್ಷಗಾನ : ಶ್ರೀ ಇಡಗುಂಜಿ ಮಹಾಗಣಪತಿ ಯಕ್ಷಗಾನ ಮಂಡಳಿ,** ಕೆರೆಮನೆ




**ಫೆಬ್ರವರಿ 16, 2019, ಅಪರಾಹ್ನ 2 ಗಂಟೆಯಿಂದ**
**ಕನ್ವೆನ್ಷನ್ ಸೆಂಟರ್, ಸಭಾಂಗಣ-2, ಜೆ.ಎನ್.ಯು .**

ಕನ್ನಡದ ಅಭಿಜಾತ ಪಠ್ಯಗಳು ಕಾಲ, ದೇಶಗಳ ಹಂಗಿನಲ್ಲಿ ಸ್ಥಗಿತವಾಗುಳಿದಿಲ್ಲ. ಪಂಪನ ವಿಕ್ರಮಾರ್ಜುನ ವಿಜಯದ 12 ಮತ್ತು 13ನೇ ಆಶ್ವಾಸದಿಂದ ಪ್ರೇರಣೆ ಪಡೆದ ರನ್ನನು ಗದಾಯುದ್ಧಂ ಎಂಬ ಶಕ್ತಿಶಾಲೀ ಕಾವ್ಯವನ್ನು ಚಂಪೂ ರೂಪದಲ್ಲಿ ಮರುಸೃಷ್ಟಿಸಿದ. ಕುಮಾರವ್ಯಾಸನು ಅದನ್ನು ಹಾಡಲು ಅನುಕೂಲವಾಗುವಂತೆ ಷಟ್ಪದಿಯಲ್ಲಿ ಬರೆದ. ಗಮಕಿಗಳು ಅದನ್ನು ಮನದುಂಬಿ ಹಾಡಿದರು. ಹರಿದಾಸರು ಹರಿಕತೆ ಮಾಡಿದರು. ಯಕ್ಷಗಾನ ಕಲಾವಿದರಂತೂ ಸಂಗೀತ, ಕುಣಿತ, ವೇಷಭೂಷಣ ಮತ್ತು ಅದ್ಭುತ ಮಾತುಗಾರಿಕೆಯ ಮೂಲಕ ಗದಾಯುದ್ಧವನ್ನು ಲಕ್ಷಾಂತರ ನೋಡುಗರಿಗೆ ಮುಟ್ಟಿಸಿದರು.

ಹೀಗೆ ಒಂದು ಪಠ್ಯವು ಬಹುರೂಪಿಯಾಗಿ ವಿಸ್ತಾರಗೊಳ್ಳುತ್ತಾ ಬದುಕುಳಿದ ಬಗೆಯ ಚೋದ್ಯವನ್ನು ಸಾಕ್ಷಾತ್ಕರಿಸಿಕೊಳ್ಳುವುದು ಈ ಕಾರ್ಯಕ್ರಮದ ಪ್ರಮುಖ ಉದ್ದೇಶ.

**ದಯವಿಟ್ಟು ಬನ್ನಿ**

**ಡಾ. ಪುರುಷೋತ್ತಮ ಬಿಳಿಮಲೆ**
ಕನ್ನಡ ಅಧ್ಯಯನ ಪೀಠ, ಜೆ.ಎನ್.ಯು

ಸಂಪುಟ 29 ಸಂಚಿಕೆ 5
ಫೆಬ್ರವರಿ 2019, ಬೆಲೆ ರೂ. 1

## ನಮ್ಮನಮ್ಮೊಳಗೆ

# ಸರ್ವ ಸದಸ್ಯರ ಅಂತರಂಗದ ಅರಿವಿನೊಂದಿಗೆ...

ಹೊಸ ಕನಸುಗಳ ಮತ್ತು ಆಶಯುಗಳ ಮೆಟ್ಟಿಲೇರುತ್ತ ತಮಗೆಲ್ಲರಿಗೂ ಹಾರ್ದಿಕ ಶುಭಾಶಯುಗಳು ಮತ್ತು ಅಭಿನಂದನೆಗಳು. ನನ್ನ ಈ ಮೊದಲ ಪ್ರಾರಂಭಿಕ ನುಡಿಯಲ್ಲಿ ನೆನಪಿಸಿಕೊಳ್ಳಬೇಕಾದ ಎರಡು ಪ್ರಮುಖ ವಿಚಾರಗಳೆಂದರೆ, ಒಂದು, ಈ ವರುಷ ನಮ್ಮೆಲ್ಲರ ದೆಹಲಿ ಕರ್ನಾಟಕ ಸಂಘ ತನ್ನ ಎಪ್ಪತ್ತನೆಯ ವಸಂತಗಳನ್ನು ಪೂರೈಸುತ್ತಿರುವುದು, ಎರಡನೇಯದಾಗಿ ನಮ್ಮೆಲ್ಲರ ನೆಚ್ಚಿನ 'ಅಭಿಮತ' ತನ್ನ ಮೂವತ್ತರ ಹೊಸ್ತಿಲಲ್ಲಿ ಕಾಲಿಡುತ್ತಿರುವುದು. ಇವೆಲ್ಲದರ ಸಂತಸವನ್ನು ಹಂಚಿಕೊಳ್ಳುವುದಕ್ಕೆ ನಾವೆಲ್ಲ ಸೇರಿ ವಿಶಿಷ್ಟ ಮತ್ತು ವಿನೂತನವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರತ್ತ ಮಂಥನ ಮಾಡಬೇಕಿದೆ.

ದೆಹಲಿ ಕರ್ನಾಟಕ ಸಂಘದ ನೂತನ ಕಾರ್ಯಕಾರಿ ಸಮಿತಿ ಇದೀಗ ಈ ಎಲ್ಲ ಹೊಸ ಆಶಯ ಮತ್ತು ಕನಸುಗಳೊಂದಿಗೆ ಅಧಿಕಾರವನ್ನು ವಹಿಸಿಕೊಂಡಿದೆ. ಜನವರಿ 13ರಂದು ನಡೆದ ಚುನಾವಣೆಯ ಪ್ರಕ್ರಿಯೆಯಲ್ಲಿ ತಾವೆಲ್ಲ ಉತ್ಸಾಹದಿಂದ ಭಾಗವಹಿಸುವದರ ಮೂಲಕ ನಮ್ಮೆಲ್ಲರನ್ನೂ ಸಂಘದ ಈ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಿದ್ದೀರಿ. ಅದಕ್ಕಾಗಿ ತಮಗೆಲ್ಲರಿಗೂ ಹೃತ್ಪೂರ್ವಕವಾದ ಕೃತಜ್ಞತೆಗಳು. ಈ ಚುನಾವಣಾ ಕಾರ್ಯವನ್ನು ತುಂಬಾ ಮುತುವರ್ಜಿಯಿಂದ ನಡೆಸಿಕೊಟ್ಟ ಶ್ರೀ ಶಿವಾನಂದ ಹೆಬ್ಬಾರರವರಿಗೆ ಮತ್ತು ಶ್ರೀ ಲಕ್ಷ್ಮೀನಾರಾಯಣ ರಾವ್ ರವರಿಗೆ (ಜೊತೆಗೆ ಕರ್ನಾಟಕ ಬ್ಯಾಂಕಿನ ಎಲ್ಲ ಸ್ನೇಹಿತರಿಗೆ) ಕಾರ್ಯಕಾರಿ ಸಮಿತಿಯ ಪರವಾಗಿ ಮತ್ತು ತಮ್ಮೆಲ್ಲರ ಪರವಾಗಿ ತುಂಬು ಹೃದಯದ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಸಂಘದ ಸಿಬ್ಬಂದಿಯವರೆಲ್ಲರೂ ಸಹ (ಮುಖ್ಯವಾಗಿ ಶ್ರೀ ಬಾಲಚಂದ್ರ, ಶ್ರೀ ಶೇಖರ ಮತ್ತು ಶ್ರೀ ದೇವಯ್ಯ) ಎಂದಿನಂತೆ ತಮ್ಮ ಕಾರ್ಯಕುಶಲತೆಯಿಂದ ಕೆಲಸ ಮಾಡಿದ್ದನ್ನು ಇಲ್ಲಿ ದಾಖಲಿಸುತ್ತಿದ್ದೇನೆ. ಜನವರಿ 17ರಂದು ನಡೆದ ಅಧಿಕಾರ ಹಸ್ತಾಂತರ ಸಭೆಯ ಉಲ್ಲೇಖವನ್ನು ನಾನು ಮಾಡಬೇಕು. ಹಿಂದಿನ ಕಾರ್ಯಕಾರಿ ಸಮಿತಿಯವರು ಸಾಕಷ್ಟು ಕಾರ್ಯಚಟುವಟಿಗೆಗಳನ್ನು ಹಮ್ಮಿಕೊಂಡದ್ದನ್ನೂ ಸಹ ಇಲ್ಲಿ ನೆನಸಿಕೊಳ್ಳಬಯಸುತ್ತೇನೆ.

ಹಲವಾರು ಬಗೆಯ ಸವಾಲುಗಳು ಈ ಕಾರ್ಯಕಾರಿ ಸಮಿತಿಯ ಎದುರಿಗಿವೆ. ಅದರಲ್ಲಿ ಪ್ರಮುಖವಾದದ್ದು ದೆಹಲಿಯ ಮತ್ತು ಎನ್.ಸಿ.ಆರ್. ನಲ್ಲಿರುವ ಸಂಘದ ಸದಸ್ಯರನ್ನು ಮತ್ತು ದೆಹಲಿ ಕನ್ನಡಿಗರನ್ನು ನಮ್ಮ ಮುಂದಿನ ಕಾರ್ಯಚಟುವಟಿಕೆಗಳನ್ನು ರೂಪಿಸುವಲ್ಲಿ ಒಳಗೊಳ್ಳುವಂತೆ ಮಾಡುವುದು. ಸಂಘದ ಕಾರ್ಯಚಟುವಟಿಕೆಗಳನ್ನು ಅನುಮೋದಿಸುವ ಹೊಣೆಗಾರಿಕೆ ಕಾರ್ಯಕಾರಿ ಸಮಿತಿಯದ್ದೇ ಆಗಿದ್ದರೂ, ಈ ಬಗೆಯ ನಿರ್ಣಯುಗಳನ್ನು ತೆಗೆದುಕೊಳ್ಳುವಾಗ ಸಂಘದ ಸರ್ವಸದಸ್ಯರ ಅಂತರಂಗವನ್ನು ಅರಿತುಕೊಳ್ಳುವುದು ಅಗತ್ಯವಾಗುತ್ತದೆ.

ಈ ಕಾರಣಕ್ಕಾಗಿಯೆ ಸಂಘದ ಸಂವಿದಾನದಲ್ಲೇ ಉಪಸಮಿತಿಗಳನ್ನು ರಚಿಸಿ ಅದರಲ್ಲಿ ಸಂಘದ ಸದಸ್ಯರು ಸಕ್ರಿಯವಾಗಿ ಭಾಗವಹಿಸುವ ಬಗ್ಗೆ ಉಲ್ಲೇಖವಿದೆ. ಇದಕ್ಕೆ ಅನುಗುಣವಾಗಿ ಹಿಂದಿನ ಕಾರ್ಯಕಾರಿ ಸಮಿತಿಗಳು ಉಪಸಮಿತಿಗಳನ್ನು ರಚಿಸಿ ಉತ್ತಮವಾದ ಕಾರ್ಯಕ್ರಮಗಳನ್ನು ನೀಡಿವೆ. ನಮ್ಮ ಸದಸ್ಯರಲ್ಲಿ ವಿವಿಧ ಸೃಜನಶೀಲ ಮತ್ತು ಕ್ರೀಡಾರಂಗಗಳಲ್ಲಿ ನಿಷ್ಣಾತರಾದ ಪ್ರತಿಭಾವಂತರಿದ್ದಾರೆ. ಅವರಿಗೆಲ್ಲ ಸಂಘದ ಚುನಾವಣೆಯಲ್ಲಿ ಸ್ಪರ್ಧಿಸಿ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗುವ ವ್ಯವಧಾನವಿರಲಿಕ್ಕಿಲ್ಲ ಅಥವಾ ಸಾಧ್ಯತೆಗಳಿರಲಿಕ್ಕಿಲ್ಲ. ಚುನಾವಣಾ ಕಣಕ್ಕಿಳಿದರೂ ಆಯ್ಕೆಯಾಗುವಷ್ಟು ಮತಗಳನ್ನು ಪಡೆಯುಲು ಸಾಧ್ಯವಾಗಿರಲಿಕ್ಕಿಲ್ಲ. ಹಾಗೆಂದು ಈ ಪ್ರತಿಭಾವಂತ ಹಾಗೂ ಉತ್ಸಾಹಿ ಸದಸ್ಯರ ಸಹಯೋಗ ಸಂಘಕ್ಕೆ ಲಭ್ಯವಾಗದೆ ಇರಬಾರದು. ಈ ನಿಟ್ಟಿನಲ್ಲಿ ಉಪಸಮಿತಿಗಳಲ್ಲಿ ಅವರನ್ನು ಸೇರಿಸಿಕೊಂಡು ಸಂಘಕ್ಕೆ ಅವರ ಸೇವೆ ಸಿಗುವಂತಾಗಬೇಕು. ಇನ್ನೂ ಮುಖ್ಯವಾಗಿ ದೆಹಲಿ ಮತ್ತು ಎನ್.ಸಿ.ಆರ್.ನ ಬೇರೆ ಬೇರೆ ಕನ್ನಡ ಸಂಘಟನೆಗಳಿಂದ ಉಪಸಮಿತಿಗಳಿಗೆ ಸದಸ್ಯರನ್ನು ಬರುವಂತೆ ನೋಡಿಕೊಂಡರೆ ಸಂಘದ ಪ್ರಜಾಸತ್ತಾತ್ಮಕ ತಳಪಾಯಕ್ಕೆ ಇನ್ನೂ ಗಟ್ಟಿತನ ಬಂದಂತಾಗತ್ತದೆ, ಈಗ ಆ ಪರಂಪರೆಯನ್ನು ಇನ್ನೂ ಉಪಯುಕ್ತವಾಗಿ ಮುಂದುವರೆಸಿಕೊಂಡು ಹೋಗುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ.

ಮೇಲೆ ಹೇಳಿದಂತೆ, ದೆಹಲಿ ಕರ್ನಾಟಕ ಸಂಘದ ಸದಸ್ಯತ್ವದ ವಿಸ್ತಾರತೆ ಈಗ ದೆಹಲಿಯು ಹಾಗೂ ಎನ್.ಸಿ.ಆರ್.ನ ವಿವಿಧ ಭಾಗಗಳಿಗೂ ಪಸರಿಸಿದೆ. ದೆಹಲಿಯ ವಿಸ್ತಾರವೇ ಬಹು ದೊಡ್ಡದು. ಅದರೊಂದಿಗೆ ಎನ್.ಸಿ.ಆರ್. (ಗುರುಗ್ರಾಮ, ನೊಯಿಡಾ, ಫರಿದಾಬಾದ್, ಗಾಜಿಯಾಬಾದ್, ಬಿವಾಡಿ) ಜಾಗೆಗಳನ್ನು ಸೇರಿಸಿ ಬಿಟ್ಟರೆ ಈ ವಿಸ್ತಾರತೆಯ ಹರವು ಇನ್ನೂ ಹೆಚ್ಚುತ್ತದೆ. ಇನ್ನು ದೆಹಲಿಯಲ್ಲೇ ನೋಡುವುದಾದರೆ, ಜನಕಪುರಿಯಿಂದ ಹಿಡಿದು, ದ್ವಾರಕಾ, ರಾಜೇಂದ್ರ ನಗರ, ವಸಂತಕುಂಜ, ಐ.ಐ.ಟಿ., ದೆಹಲಿ ವಿಶ್ವವಿದ್ಯಾಲಯ, ಜೆ.ಎನ್.ಯು, ಮಯೂರ ವಿಹಾರ, ವಸುಂಧರಾ...ಹೀಗೆ ಈ ವಿಸ್ತಾರತೆಯ ಹರವು ಬಲು ದೊಡ್ಡದು. ಇಲ್ಲೆಲ್ಲಾ ವಾಸಿಸುತ್ತಿರುವ ಕನ್ನಡಿಗರು ಅಲ್ಲಲ್ಲಿ ತಮ್ಮದೇ ಆದ ಕನ್ನಡ ಸಂಘಗಳನ್ನು, ಬಳಗಗಳನ್ನು ಕಟ್ಟಿಕೊಂಡಿದ್ದಾರೆ. ಇದರಲ್ಲಿ ಮುಖ್ಯವಾಗಿ, ಜನಕಪುರಿಯ ಕನ್ನಡ ಕೂಟ, ನೊಯಿಡಾದ ಕನ್ನಡ ಸಂಗಮ, ಐ.ಐ.ಟಿ.ಯ ಅರಾವಳಿ ಕನ್ನಡ ಸಂಘ, ಜೆ.ಎನ್.ಯು.ವಿನ ಶರಾವತಿ ಕನ್ನಡ ಸಂಘ, ರಾಜೇಂದ್ರ ನಗರದ ಕನ್ನಡ ಬಳಗ, ದ್ವಾರಕಾದ ಕನ್ನಡ ಬಳಗ, ಗುರುಗ್ರಾಮ ಕನ್ನಡ ಸಂಘ, ಫರಿದಾಬಾದ್‌ನ ಕನ್ನಡ ಸಂಘ, ಭಿವಾಡಿಯ ಕನ್ನಡ ಸಂಘ...ಹೀಗೆ ಅಲ್ಲಿನ ಕನ್ನಡಿಗರು ತಮ್ಮ ಪುಟ್ಟದಾದ ಕನ್ನಡ ಲೋಕವನ್ನು ಕಟ್ಟಿಕೊಂಡಿದ್ದಾರೆ.

ಇವೆಲ್ಲದರ ಹೊರತಾಗಿ ದೆಹಲಿಯ ಮಟ್ಟದಲ್ಲಿ ಕಳೆದ ಮೂರು ದಶಕಗಳಿಗೂ ಮೀರಿ ತಮ್ಮ ಅಸ್ತಿತ್ವವನ್ನು ಹೊಂದಿದ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ ಜೊತೆಗೆ, ದೆಹಲಿ ಪೋಲಿಸ್ ಕನ್ನಡಿಗರ ಕಲ್ಯಾಣ ಸಮಿತಿ, ದೆಹಲಿ ತುಳುಸಿರಿ, ಕೊಡವ (ಕೂರ್ಗ್) ಸಮಾಜ, ಕೊಂಕಣಿ ಅಸೋಸಿಯೇಶನ್ (ಸೌತ್ ಕೆನರಾ ಕ್ಲಬ್, ಜೋಳದ ಬಳಗ ಇದ್ದ ನೆನಪು ಮಾಡಿಕೊಳ್ಳುತ್ತ)...ಇವೆಲ್ಲದರ ಜೊತೆಗೆ ಬೇರೆ ಬೇರೆ ಸಮುದಾಯಗಳ ಬಳಗಗಳೂ ದೆಹಲಿಯ ಕರ್ನಾಟಕದ ಮತ್ತು ಕನ್ನಡದ ಪರಂಪರೆಯನ್ನು ಇನ್ನೂ ಶ್ರೀಮಂತಗೊಳಿಸಿವೆ ಎಂದರೆ ತಪ್ಪಾಗೆಲಾಗದು.

ಹೀಗಿರುವಾಗ, ಈ ಎಲ್ಲ ಸಂಘಟನೆಗಳಿಗೆ ಬೆಂಬಲವಾಗಿ ಹೆಗಲುಕೊಟ್ಟು ನಿಲ್ಲಬೇಕಾದ ಜವಾಬ್ದಾರಿ ದೆಹಲಿ ಕರ್ನಾಟಕ ಸಂಘದ್ದಾಗಿದೆ. ಇದು ಸಾಧ್ಯವಾಗುವುದು ಸಂಘದ ಎಲ್ಲ ಕಾರ್ಯಚಟುವಟಿಕೆಗಳಲ್ಲಿ ಈ ಎಲ್ಲ ದೆಹಲಿಯ ಸಂಘಟನೆಗಳು, ಬಳಗಗಳು ಒಳಗೊಂಡಾಗ ಎಂಬುದರಲ್ಲಿ ಎರಡು ಮಾತಿಲ್ಲ. ಈ ಎಲ್ಲ ಸಂಘಟನೆಗಳಿಂದ ಒಬ್ಬಿಬ್ಬ ಪ್ರತಿಭಾವಂತ ಪ್ರತಿನಿಧಿಗಳನ್ನು ವಿವಿಧ ಉಪಸಮಿತಿಗಳಿಗೆ ಹಾಕಿಕೊಂಡರೆ ಸಂಘದ ಚಟುವಟಿಕೆಗಳಿಗೆ ಹೊಸ ಮೆರಗು ಬಂದಂತಾಗುತ್ತದೆ.

ಕೊನೆಯಲ್ಲಿ ಹೊಸ ಕಾರ್ಯಕಾರಿ ಸಮಿತಿಗೆ ಆಯ್ಕೆಯಾಗಿ ಬಂದ ಎಲ್ಲ ಸದಸ್ಯರನ್ನೂ ಅಭಿನಂದಿಸುತ್ತ, ಅವರನ್ನು ಹಾರ್ದಿಕವಾಗಿ ಸ್ವಾಗತಿಸುತೇನೆ. ನಾವೆಲ್ಲ ಸೇರಿ ನಮ್ಮ ಮುಂದಿರುವ ಕಾಲವಧಿಯಲ್ಲಿ ಒಟ್ಟಾಗಿ ಮತ್ತು ಅಭೂತಪೂರ್ವ ರೀತಿಯಲ್ಲಿ ಕೆಲಸ ಮಾಡೋಣ ಎಂದು ಹಾರೈಸುತ್ತೇನೆ.

***ಡಾ. ವೆಂಕಟಾಚಲ ಹೆಗಡೆ***
**ಅಧ್ಯಕ್ಷರು**



# ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಡಾ. ವೆಂಕಟಾಚಲ ಜಿ. ಹೆಗಡೆ



ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಜೆ.ಎನ್.ಯು.ವಿನ ಪ್ರಾಧ್ಯಾಪಕ ಡಾ. ವೆಂಕಟಾಚಲ ಜಿ. ಹೆಗಡೆ ಅವರು ಆಯ್ಕೆಯಾಗಿದ್ದಾರೆ. ಪ್ರಧಾನ ಕಾರ್ಯದರ್ಶಿಯಾಗಿ ಸಿ.ಎಂ. ನಾಗರಾಜ ಅವರು ನಾಲ್ಕನೇ ಬಾರಿಗೆ ಮರು ಆಯ್ಕೆಗೊಂಡಿದ್ದಾರೆ.

ಎರಡು ವರ್ಷಗಳ (2019–21) ಅವಧಿಗೆ ಜನವರಿ 13ರಂದು ಚುನಾವಣೆ ನಡೆದಿದ್ದು ಡಾ. ಅವನೀಂದ್ರನಾಥ್ ರಾವ್ ಮತ್ತು ಜಮುನಾ ಸಿ. ಮಠದ ಉಪಾಧ್ಯಕ್ಷರಾಗಿ, ರಾಧಾಕೃಷ್ಣ ಮತ್ತು ಪೂಜಾ ರಾವ್ ಜಂಟೀ ಕಾರ್ಯದರ್ಶಿಗಳಾಗಿ ಹಾಗೂ ಶ್ರೀಮತಿ ಆಶಾಲತಾ ಎಂ, ಖಜಾಂಚಿಯಾಗಿ ಆಯ್ಕೆಯಾಗಿದ್ದಾರೆ.



ಆಡಳಿತ ಮಂಡಳಿಗೆ ಡಾ. ಎಂ.ಎಸ್. ಶಶಿಕುಮಾರ್, ಶ್ರೀ ಶಿವಾನಂದ ಎಸ್. ಇಂಗಳೇಶ್ವರ, ಶ್ರೀ ಎನ್.ಆರ್. ಶ್ರೀನಾಥ್, ಶ್ರೀಮತಿ ಸವಿತಾ ನೆಲ್ಲಿ, ಶ್ರೀ ಶಿವಪ್ಪ ಎಂ., ಶ್ರೀ ಸಂತೋಷ ಜೆ, ಶ್ರೀಮತಿ ಶೋಭಾ ಗೌಡ ಮತ್ತು ಶ್ರೀಮತಿ ಸುಮಿತಾ ಮುರಗೋಡ ಸದಸ್ಯರಾಗಿ ಆರಿಸಿ ಬಂದಿದ್ದಾರೆ.

ಕಾರ್ಪೋರೇಷನ್ ಬ್ಯಾಂಕಿನ ಮಹಾಪ್ರಭಂದಕ ಶ್ರೀ ಶಿವಾನಂದ ಎಸ್. ಹೆಬ್ಬಾರ್, ಚುನಾವಣಾ ಅಧಿಕಾರಿಯಾಗಿ ಮತ್ತು ಕರ್ನಾಟಕ ಬ್ಯಾಂಕಿನ ಪ್ರಭಂದಕ ಶ್ರೀ ಲಕ್ಷ್ಮೀನಾರಾಯಣ ರಾವ್ ಜಂಟೀ ಚುನಾವಣಾ ಅಧಿಕಾರಿಯಾಗಿ ಚುನಾವಣೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟಿದ್ದರು. ■

## ಕಾರ್ಯಕಾರಿ ಸಮಿತಿ 2019-21



### ಡಾ. ವೆಂಕಟಾಚಲ ಜಿ. ಹೆಗಡೆ
**ಅಧ್ಯಕ್ಷ**

ಜೆ.ಎನ್.ಯು.ವಿನಲ್ಲಿ ಅಂತರರಾಷ್ಟ್ರೀಯ ಕಾನೂನು ವಿಭಾಗದಲ್ಲಿ ಪ್ರಾಧ್ಯಾಪಕರು. ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿ ಮತ್ತು ಪ್ರಧಾನ ಕಾರ್ಯದರ್ಶಿಯಾಗಿ ಸಂಘದ ಬೆಳವಣಿಗೆಯಲ್ಲಿ ಮಹತ್ವದ ಪಾತ್ರ ವಹಿಸಿದ್ದಾರೆ. ಡಾ. ಹೆಗಡೆಯವರು ಸಂಘದ ನೂತನ ಸಾಂಸ್ಕೃತಿಕ ಸಮುಚ್ಚಯದ ನಿರ್ಮಾಣಕ್ಕಾಗಿ ದೇಣಿಗೆ ಸಂಗ್ರಹಿಸಲು ಕನ್ನಡದ ಕಣ್ಮಣಿ, ವರನಟ ಡಾ. ರಾಜ್‌ಕುಮಾರ್ ಅವರಿಂದ ರಸಮಂಜರಿ ಕಾರ್ಯಕ್ರಮವನ್ನು ಆಯೋಜಿಸಿದ್ದು ಒಂದು ಐತಿಹಾಸಿಕ ದಾಖಲೆ. ನೂತನ ಕಟ್ಟಡವನ್ನು ನಿರ್ಮಿಸಲು ತೊಡಕಾಗಿದ್ದ ಕೆನರಾ ಬ್ಯಾಂಕ್ ವಿವಾದವನ್ನು ಬಗೆಹರಿಸಲು ಮಾಜಿ ಅಧ್ಯಕ್ಷ ದಿ. ಕೆ. ಆರ್ ನಾಗರಾಜ್ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ನೆರವಾಗಿದ್ದರು. ಸಂಘದ ಮುಖವಾಣಿ 'ಅಭಿಮತ'ದ ಹುಟ್ಟು ಮತ್ತು ಬೆಳವಣಿಗೆಯಲ್ಲಿ ಗಣನೀಯ ಕೊಡುಗೆ ನೀಡಿರುವ ಇವರು ಅದರ ಸಂಪಾದಕರಾಗಿ ನಿರಂತರ ಹದಿನಾಲ್ಕು ವರ್ಷ ಅದನ್ನು ಮುನ್ನಡೆಸಿದ್ದಾರೆ. ಉತ್ತಮ ಲೇಖಕರು ಮತ್ತು ಆಡಳಿತಗಾರರೂ ಆಗಿರುವ ಡಾ. ಹೆಗಡೆಯವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ಸದಸ್ಯರಾಗಿ ಮತ್ತು ದೆಹಲಿ ಸ್ಕೂಲ್ ಆಫ್ ಕಂಪ್ಯೂಟರ್ ಸೈಯನ್ಸ್‌ನ ಆಡಳಿತ ಮಂಡಳಿಯ ಸದಸ್ಯರಾಗಿಯೂ ಗುರುತರ ಸೇವೆ ಸಲ್ಲಿಸಿದ್ದಾರೆ. ಹೆಗಡೆಯವರು ಗೋಕರ್ಣ ಮಂಡಳದ ಸದಸ್ಯರಾಗಿಯೂ ಸಾಮಾಜಿಕ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ. 'ಧೌಲಧಾರ' ಎಂಬ ಪ್ರವಾಸ ಕಥನವನ್ನು ಬರೆದಿರುವ ಹೆಗಡೆಯವರಿಗೆ ಪ್ರಜಾವಾಣಿಯ ಪ್ರತಿಷ್ಠಿತ ಕಥಾ ಪ್ರಶಸ್ತಿಯೂ ಲಭಿಸಿದೆ.



### ಡಾ. ಅವನೀಂದ್ರನಾಥ್ ರಾವ್
**ಉಪಾಧ್ಯಕ್ಷ**

ಕೇಂದ್ರ ಸಚಿವಾಲಯ ಗ್ರಂಥಾಲಯದ ಅಧಿಕಾರಿ. ಸಂಸ್ಕೃತಿ ಮಂತ್ರಾಲಯದ ಮೂಲಕ ಹಲವಾರು ಸಾಹಿತಿ ಮತ್ತು ಕಲಾವಿದರಿಗೆ ನೆರವಾಗಿದ್ದಾರೆ. ದೆಹಲಿ ಕರ್ನಾಟಕ ಸಂಘದ ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. ದೆಹಲಿ ತುಳುಸಿರಿಯ ಪ್ರಥಮ ಅಧ್ಯಕ್ಷರು. ಅತ್ಯುತ್ತಮ ಸಂಘಟಕರಾಗಿರುವ ಇವರು ದೆಹಲಿಗೆ ಬರುವ ಮೊದಲೇ ನಾಡೋಜ ಕಯ್ಯಾರ ಕಿಞ್ಞಣ್ಣ ರೈ ಅಧ್ಯಕ್ಷತೆಯ 'ಮಕ್ಕಳ ಸಾಹಿತ್ಯ ಶತಮಾನ' ರಾಜ್ಯ ಸಮಾವೇಶದ ಸಂಚಾಲಕರಾಗಿದ್ದರು. ದೆಹಲಿ ತುಳುಸಿರಿಯ ಅಧ್ಯಕ್ಷತೆಯ ತಮ್ಮ ಅವಧಿಯಲ್ಲಿ ರಾಜಧಾನಿಯಲ್ಲಿ ಪ್ರಥಮ ತುಳು 'ರಂಗೋತ್ಸವ'ವನ್ನು ಆಯೋಜಿಸಿದ್ದರು. ಸಾಹಿತಿಯಾಗಿ 'ದೆಹಲಿ ಕನ್ನಡ ಜಗತ್ತಿನಲ್ಲಿ' ಸೇರಿದಂತೆ ಐದು ಕೃತಿಗಳನ್ನು ಬರೆದಿದ್ದಾರೆ. ಮಂಗಳೂರು ಆಕಾಶವಾಣಿಯಲ್ಲಿ ನಿರೂಪಕರಾಗಿದ್ದರು. ಕ್ರಿಕೆಟಿಗನಾಗಿ ವಿಶ್ವವಿದ್ಯಾಲಯ ಆಯೋಜಿಸಿದ 'ಬಿ.ಸಿ. ಆಳ್ವ ಟ್ರೋಫಿ' ಪಂದ್ಯಾವಳಿಯಲ್ಲಿ ಆಡಿದ್ದಾರೆ. ರಂಗ ಕಲಾವಿದರಾಗಿ ಹತ್ತು ಹಲವು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಸಚಿವಾಲಯ ಗ್ರಂಥಾಲಯಗಳ ಸಂಶೋಧನೆಗೆ ಡಾಕ್ಟರೇಟ್ ಪಡೆದಿದ್ದಾರೆ. ಬಹು ಆಯಾಮಗಳ ಕೊಡುಗೆಗಳನ್ನು ನೀಡಿರುವ ಡಾ. ಅವನೀಂದ್ರರು ನಾಡಿನ ಹೆಮ್ಮೆಯ ಬಿ.ಎಂ.ಶ್ರೀ ಪ್ರತಿಷ್ಠಾನದ ಪ್ರಶಸ್ತಿಯ ಗೌರವಕ್ಕೆ ಪಾತ್ರರಾಗಿದ್ದಾರೆ.



### ಶ್ರೀಮತಿ ಜಮುನಾ ಸಿ. ಮಠದ
**ಉಪಾಧ್ಯಕ್ಷೆ**

ಬಿ.ಎ.ಎಲ್.ಎಲ್.ಬಿ., ನ್ಯಾಚರೋಪತಿಯಲ್ಲಿ ಡಿಪ್ಲೋಮ. ವೃತ್ತಿಯಲ್ಲಿ ಶಿಕ್ಷಕಿ. ಸಾಹಿತ್ಯ, ಸಂಗೀತ, ನಾಟಕ ಮತ್ತು ಲಲಿತ ಕಲೆಗಳಲ್ಲಿ ಅನನ್ಯ ಸಾಧನೆ ಮಾಡಿದ್ದಾರೆ. ಎರಡು ದಶಕಗಳಿಂದ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯೆಯಾಗಿ ಕ್ರಿಯಾಶೀಲರಾಗಿ ದುಡಿದಿದ್ದಾರೆ. ಸಂಘದಲ್ಲಿ ಕನ್ನಡ ಕಲಿಕಾ ತರಗತಿ ಮತ್ತು ಸಂಗೀತ ಶಿಕ್ಷಣವನ್ನು ದಶಕಗಳಿಂದ ನಿರಂತರವಾಗಿ ನೀಡುತ್ತಿದ್ದಾರೆ. ಇವರ ಕತೆ ಮತ್ತು ಕವನಗಳು ಸುಧಾ ಸೇರಿದಂತೆ ಪ್ರಮುಖ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. 5 ನಾಟಕಗಳನ್ನು ರಚಿಸಿದ್ದಾರೆ. ಕರ್ನಾಟಕ ಜೋಳದ ಬಳಗದ ಸಂಚಾಲಕಿ. ಬಸವ ಇಂಟರ್ ನ್ಯಾಷನಲ್‌ನ ಸ್ಥಾಪಕ ಸದಸ್ಯೆ. ಕರ್ನಾಟಕ ರಾಜ್ಯ ಲಲಿತ ಕಲಾ ಅಕಾಡೆಮಿಯಿಂದ ಬಹುಮಾನ ಪಡೆದಿದ್ದಾರೆ. ಕಳೆದ ಬಾರಿಯ ಕಾರ್ಯಕಾರಿ ಸಮಿತಿಯಲ್ಲಿ ಜಂಟಿ ಕಾರ್ಯದರ್ಶಿಯಾಗಿ ಉತ್ತಮ ಸೇವೆ ನೀಡಿದ್ದಾರೆ.



**ಶ್ರೀ ಸಿ.ಎಂ. ನಾಗರಾಜ**
**ಪ್ರಧಾನ ಕಾರ್ಯದರ್ಶಿ**

ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆಯಲ್ಲಿರುವ ಇವರು ಮೂಲತಃ ಕೋಲಾರ ಜಿಲ್ಲೆಯವರು. ಎಂ.ಎ. ಪದವೀಧರ, ಸಮೂಹ ಮಾಧ್ಯಮ ಮತ್ತು ಪತ್ರಿಕೋದ್ಯಮದಲ್ಲಿ ಸ್ನಾತಕೋತ್ತರ ಡಿಪ್ಲೊಮ. ನುರಿತ ಕ್ರೀಡಾಪಟು. ಸ್ಥಳೀಯ ಕಲಾವಿದರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವಿನಿಂದ ಕರ್ನಾಟಕದ ಪರಿಣಿತ ಕಲಾವಿದರಿಂದ ತರಬೇತಿ ಕೊಡಿಸಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಸಂಘಟಿಸಿದ್ದಾರೆ. ದೆಹಲಿ ಕರ್ನಾಟಕ ಸಂಘಕ್ಕೆ ಕರ್ನಾಟಕ ಸರಕಾರ ಘೋಷಿಸಿದ ವಿಶೇಷ ಅನುದಾನ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮದ ಆಯೋಜನೆಗಾಗಿ ನೀಡಿದ ಅನುದಾವನ್ನು ತ್ವರಿತಗತಿಯಲ್ಲಿ ಬಿಡುಗಡೆ ಮಾಡಿ ತರುವಲ್ಲಿ ಯಶಸ್ವಿಯಾಗಿದ್ದಾರೆ. ದೆಹಲಿ ಪೋಲಿಸ್ ಕಲ್ಯಾಣ ಸಮಿತಿಯ ಕಾರ್ಯದರ್ಶಿಯಾಗಿ ಹಾಗೂ ದೆಹಲಿ ಒಕ್ಕಲಿಗ ಗೌಡ ಸಮಾಜದ ಉಪಾಧ್ಯಕ್ಷ ಮತ್ತು ಖಜಾಂಚಿಯಾಗಿ ಸೇವೆ ಸಲ್ಲಿಸಿದ್ದಾರೆ. 2011ರಲ್ಲಿ ಗಂಗಾವತಿಯಲ್ಲಿ ನಡೆದ ಸಾಹಿತ್ಯ ಸಮ್ಮೇಳನದಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ವತಿಯಿಂದ ರಾಜ್ಯದ ಮುಖ್ಯಮಂತ್ರಿಯವರಿಂದ ಗೌರವವನ್ನು ಸ್ವೀಕರಿಸಿದ್ದಾರೆ ಹಾಗೂ 'ಕನ್ನಡ ಸೇವೆ' ಕ್ಷೇತ್ರದಲ್ಲಿ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು 2016ನೇ ಸಾಲಿನ 'ನಾಡಪ್ರಭು ಕೆಂಪೇಗೌಡ' ಪ್ರಶಸ್ತಿಯನ್ನು ರಾಜ್ಯದ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ಅವರು ನೀಡಿ ಗೌರವಿಸಿದ್ದಾರೆ. ದೆಹಲಿಯಲ್ಲಿ ನಡೆದ ನಾಡಪ್ರಭು ಕೆಂಪೇಗೌಡ ರಾಷ್ಟ್ರೀಯ ಉತ್ಸವಕ್ಕೆ ಮಾನ್ಯ ರಾಷ್ಟ್ರಪತಿಗಳಾದ ಶ್ರೀ ಪ್ರಣಬ್ ಮುಖರ್ಜಿ ಅವರನ್ನು ಆಹ್ವಾನಿಸಿ ಅವರಿಂದ ಉದ್ಘಾಟಿಸಿ ಸಮಾರಂಭವನ್ನು ಯಶಸ್ವಿಗೊಳಿಸಿದ್ದಾರೆ.



**ಶ್ರೀಮತಿ ಆಶಾಲತಾ ಎಂ.**
**ಖಜಾಂಚಿ**

ಸಾಹಿತ್ಯದಲ್ಲಿ ಪದವಿ ಮತ್ತು ಇಲೆಕ್ಟ್ರಿಕಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದಿದ್ದಾರೆ. ಬೆಂಗಳೂರಿನವರಾದ ಇವರು, ಕಳೆದ ಎರಡು ಅವಧಿಯಲ್ಲಿ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆ. ಕ್ರೀಡೆ ಮತ್ತು ಸಾಂಸ್ಕೃತಿಕ ವಲಯದಲ್ಲಿ ಅತ್ಯುತ್ತಮ ಸಾಧನೆ ಮಾಡಿದ್ದಾರೆ. ಶಾಲಾ ದಿನಗಳಲ್ಲೇ ಸ್ಕೌಟ್ ಮತ್ತು ಗೈಡ್ಸ್‌ನಲ್ಲಿ ರಾಜ್ಯ ಪ್ರಶಸ್ತಿ ಪಡೆದ ಪ್ರತಿಭಾವಂತೆ. ದೆಹಲಿ ಮೆಟ್ರೋದಲ್ಲಿ ಡೆಪ್ಯುಟಿ ಸ್ಟೇಷನ್ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ನೂತನ ಗ್ರಂಥಾಲಯವನ್ನು ಸುಸಜ್ಜಿತಗೊಳಿಸಲು ದುಡಿದಿದ್ದಾರೆ. ವಾರ್ಷಿಕ ಕ್ರೀಡಾಕೂಟದಲ್ಲಿ ನಾಲ್ಕು ವೈಯಕ್ತಿಕ ಬಹುಮಾನಗಳನ್ನು ಗಳಿಸಿದ್ದಾರೆ. ಸಂಘದ ಏಕಾಂಕ ನಾಟಕ ಸ್ಪರ್ಧೆಯಲ್ಲಿ 'ಅತ್ತೆಗೆ ಲತ್ತೆ' ನಾಟಕದಲ್ಲಿ 'ಬೇಬಿ'ಯ ಪಾತ್ರಕ್ಕೆ ತೀರ್ಪುಗಾರರ ವಿಶೇಷ ಬಹುಮಾನ ಪಡೆದಿದ್ದಾರೆ. ದಿನಕರ ತಂಡದ ಪ್ರಸ್ತುತಿಯಾದ 'ರಕ್ತ ರಾತ್ರಿ', 'ಉರುಗವ್ವ', 'ತ್ಯಾಗಿ', 'ವಚನಾನುಭವ' ನಾಟಕಗಳಲ್ಲಿ ನಟಿಸಿ ಅತ್ಯುತ್ತಮ ರಂಗಕಲಾವಿದೆಯಾಗಿ ರೂಪುಗೊಂಡಿದ್ದಾರೆ. ಸಂಘ ಆಯೋಜಿಸಿದ ನೃತ್ಯ ಸಿಂಚನ, ನೃತ್ಯ ವೈಭವ, ಕಾರ್ಯಕ್ರಮದಲ್ಲಿ 150ಕ್ಕೂ ಹೆಚ್ಚು ಸ್ಥಳೀಯ ಕಲಾವಿದರನ್ನು ಒಟ್ಟುಗೂಡಿಸಿ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮವನ್ನು ನೀಡುವಲ್ಲಿ ಯಶಸ್ವಿಯಾಗಿದ್ದಾರೆ. ದೆಹಲಿ ಪೋಲಿಸ್ ಕಲ್ಯಾಣ ಸಮಿತಿ ಆಯೋಜಿಸಿದ ಹೊಸ ವರ್ಷ ಸಂಭ್ರಮಾಚರಣೆಯಲ್ಲಿ ದೆಹಲಿ ಪೋಲಿಸ್‌ನ ಸದಸ್ಯರು ಹಾಗೂ ಮಕ್ಕಳನ್ನು ಒಟ್ಟುಗೂಡಿಸಿ ಉತ್ತಮ ಕಾರ್ಯಕ್ರಮವನ್ನು ಸಂಯೋಜಿಸಿದ್ದಾರೆ. ಬಹುಮುಖ ಪ್ರತಿಭೆಯ ಆಶಾಲತಾ ಅವರು ಅತ್ಯುತ್ತಮ ನಿರೂಪಕರಾಗಿ, ಸಂಘಟಕರು ಕೂಡಾ ಆಗಿದ್ದಾರೆ.



**ಶ್ರೀ ರಾಧಾಕೃಷ್ಣ**
**ಜಂಟಿ ಕಾರ್ಯದರ್ಶಿ**

ಸುಮಾರು 30 ವರ್ಷಗಳಿಂದ ದೆಹಲಿ ಕರ್ನಾಟಕ ಭವನದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಕುಂದಾಪುರ ತಾಲೂಕಿನ ಕೋಡಿ ಗ್ರಾಮದವರು. ದೆಹಲಿ ಕರ್ನಾಟಕ ಸಂಘ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಹಲವಾರು ಬಾರಿ ಮತ್ತು ಪ್ರಸ್ತುತ ಕಾರ್ಯಕಾರಿ ಸಮಿತಿಯಲ್ಲಿ ಸದಸ್ಯನಾಗಿರುವ ಇವರ ನೇತೃತ್ವದಲ್ಲಿ ದೆಹಲಿ ಮತ್ತು ಎನ್.ಸಿ.ಆರ್.ನ ಕನ್ನಡದ ಕಾರ್ಯಕ್ರಮಗಳಿಗೆ ಶುಚಿ–ರುಚಿಯಾದ ಆಹಾರ ಒದಗಿಸುವ ಮೂಲಕ ಒಳ್ಳೆಯ ಹೆಸರನ್ನು ಪಡೆದಿದ್ದಾರೆ.



**ಶ್ರೀಮತಿ ಪೂಜಾ ರಾವ್**
**ಜಂಟಿ ಕಾರ್ಯದರ್ಶಿ**

ದೆಹಲಿ ಕರ್ನಾಟಕ ಸಂಘ, ಚಿನ್ಮಯ ಮಿಷನ್ ಮೊದಲಾದ ಕಡೆ ಅನೇಕ ಸಾಂಸ್ಕೃತಿಕ ಹಾಗೂ ಸಭಾ ಕಾರ್ಯಕ್ರಮಗಳನ್ನು ನಿರೂಪಿಸಿದ ಖ್ಯಾತಿ ಪೂಜಾ ರಾವ್ ಅವರದ್ದು. ಮೂಲತಃ ಮಂಗಳೂರಿನವರು. ಕಾರ್ಕಳದ ಭುವನೇಂದ್ರ ಕಾಲೇಜಿನಿಂದ ಬಿ.ಬಿ.ಎಂ. ಪದವಿಯನ್ನು ಪಡೆದಿರುತ್ತಾರೆ. ಬೆಂಗಳೂರು ಮತ್ತು ದೆಹಲಿ ದೂರದರ್ಶನದಲ್ಲೂ ಕಾರ್ಯಕ್ರಮ ನಿರೂಪಕಿಯಾಗಿ ಸೇವೆ ಸಲ್ಲಿಸಿರುತ್ತಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯೆಯಾಗಿ, ಕರ್ನಾಟಕ ಹಾಗೂ ಹಿಂದೂಸ್ತಾನಿ ಸಂಗೀತದಲ್ಲಿ ಪರಿಣತಿಯನ್ನು ಹೊಂದಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕ್ರಮಗಳಲ್ಲಿ ಕನ್ನಡದ ಮಕ್ಕಳಿಗೆ ಸಾಂಸ್ಕೃತಿಕ ಕಾರ್ಯಕ್ರಮ ನೀಡಲು ಪ್ರೇರಣೆ ನೀಡಿದ್ದಾರೆ.



**ಡಾ. ಎಂ.ಎಸ್. ಶಶಿಕುಮಾರ್**
**ಸದಸ್ಯರು**

ಭಾರತ ಸರ್ಕಾರದ ವಿಜ್ಞಾನ ಮತ್ತು ಔದ್ಯಮಿಕ ಸಂಶೋಧನಾ ವಿಭಾಗದಲ್ಲಿ ವಿಜ್ಞಾನಿಯಾಗಿ ಕಾರ್ಯನಿರ್ವಹಿಸುತ್ತಿರುವ ಡಾ. ಎಂ.ಎಸ್. ಶಶಿಕುಮಾರ್ ಅವರು ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಹಾಗೂ 2008-10ರಲ್ಲಿ ವ್ಯವಸ್ಥಾಪಕರಾಗಿ ಸೇವೆ ಸಲ್ಲಿಸಿದ್ದಾರೆ. ಅವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಸಸ್ಯಶಾಸ್ತ್ರದಲ್ಲಿ ಎಂ.ಎಸ್ಸಿ, ಪಿ.ಎಚ್.ಡಿ. ಪದವೀಧರರು. ಸಾಮಾಜಿಕ ಸಂಘಟನೆಗಳಲ್ಲಿ ಅವರಿಗೆ ಆಸಕ್ತಿಯಿದೆ.



**ಶ್ರೀಮತಿ ಸವಿತಾ ನೆಲ್ಲಿ**
**ಸದಸ್ಯರು**

ಮೂಲತಃ ಉಡುಪಿಯವರಾದ ಇವರು ಬಿ.ಕಾಂ. ಪದವೀಧರೆ. ಭರತನಾಟ್ಯ ಪ್ರವೀಣೆಯಾದ ಇವರು ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿಯ ಸುತ್ತಮುತ್ತಲಿನ ಹಲವಾರು ಕಡೆಗಳಲ್ಲಿ ಭರತನಾಟ್ಯ ನೃತ್ಯ ಪ್ರದರ್ಶನ ಮತ್ತಿ ನೃತ್ಯ ಸಂಯೋಜನೆಯನ್ನೂ ಮಾಡಿರುತ್ತಾರೆ. ದೆಹಲಿ, ಮೈಸೂರು ಮತ್ತು ಇತರ ಕಡೆ ನಾಟಕಗಳಲ್ಲಿ ನಟಿಸಿರುತ್ತಾರೆ. ಜನಕಪುರಿ ಮಹಿಳಾ ಮಂಡಳಿಯ ಸಕ್ರಿಯ ಸದಸ್ಯೆಯಾಗಿರುವ ಇವರು ಮಹಿಳಾ ಮಂಡಳಿಯ ಕಾರ್ಯದರ್ಶಿಯಾಗಿದ್ದಾಗ ಬೆಳ್ಳಿಹಬ್ಬ ಸೇರಿದಂತೆ ಹಲವಾರು ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಮಾಡಿರುತ್ತಾರೆ. ಇವರ ಕವನಗಳು ಅಭಿಮತದಲ್ಲಿ ಪ್ರಕಟವಾಗಿವೆ. ಸಂಘದ ಕ್ರೀಡಾ ಸ್ಪರ್ಧೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಾರೆ



**ಶ್ರೀ ಶಿವಾನಂದ ಎಸ್. ಇಂಗಳೇಶ್ವರ**
**ಸದಸ್ಯರು**

ಇವರು ಕೇಂದ್ರ ಸರ್ಕಾರದ ನೀರಾವರಿ ಇಲಾಖೆಯಲ್ಲಿ ಅಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ದೆಹಲಿಯ ಸಾಂಸ್ಕೃತಿಕ ಚಟುವಟಿಕೆಗಳಿಗೆ ತನು-ಮನ-ಧನಗಳಿಂದ ತೊಡಗಿಸಿಕೊಂಡವರು. 'ದಿನಕರ' ದೆಹಲಿ ಹವ್ಯಾಸಿ ರಂಗತಂಡದ ಸಂಸ್ಥಾಪಕ ಸದಸ್ಯ. ಇವರ ನಿರ್ದೇಶನದಲ್ಲಿ ದಿನಕರದ ಬಹುತೇಕ ನಾಟಕಗಳು ಪ್ರದರ್ಶಿತಗೊಂಡಿವೆ. ದೆಹಲಿ ಮಾತ್ರವಲ್ಲದೇ ಇವರು ನಿರ್ದೇಶಿಸಿದ ನಾಟಕಗಳು ಬೆಂಗಳೂರು, ಮೈಸೂರು ರಂಗಾಯಣ, ಹಂಪಿ ಉತ್ಸವ ಮತ್ತು ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದಲ್ಲೂ ಪ್ರದರ್ಶನಗೊಂಡಿವೆ. ದೆಹಲಿಯ ರಂಗಭೂಮಿಗೆ ಹೊಸ ಆಯಾಮ ನೀಡಿದ ಇಂಗಳೇಶ್ವರ ಅವರಿಗೆ ರಂಗಮಂಟಪ ಬೆಂಗಳೂರು 2016ರ 'ರಂಗ ಪ್ರಶಸ್ತಿ' ನೀಡಿ ಗೌರವಿಸಿದೆ.



**ಶ್ರೀ ಸಂತೋಷ ಜೆ.**
**ಸದಸ್ಯರು**

ಪ್ರಸ್ತುತ 14 ವರ್ಷದಿಂದ ಹೋಂಡಾ ಮೋಟರ್ಸ್, ಗುರುಗ್ರಾಮದಲ್ಲಿ ಉದ್ಯೋಗದಲ್ಲಿರುವ ಇವರು ಮೂಲತಃ ಹಾಸನದವರು. ಗುರುಗಾಂವ್ ಕನ್ನಡ ಸಂಘದಲ್ಲಿ ಸಾಂಸ್ಕೃತಿಕ, ಕ್ರೀಡಾ ಮತ್ತು ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.



**ಶ್ರೀ ಶ್ರೀನಾಥ್ ಎನ್.ಆರ್.**
**ಸದಸ್ಯರು**

ಮೂಲತಃ ಮೈಸೂರಿನವರಾದ ಇವರು ದೆಹಲಿ ಪೋಲಿಸ್ ಇಲಾಖೆಯಲ್ಲಿ ಉದ್ಯೋಗಿಯಾಗಿದ್ದಾರೆ. ಪ್ರಸಕ್ತ ಜನಕಪುರಿ ಕನ್ನಡ ಕೂಟದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಎರಡು ಬಾರಿ ಜಂಟಿ ಕಾರ್ಯದರ್ಶಿಯಾಗಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಕಾರ್ಯಕಾರೀ ಸಮಿತಿಯ ಸದಸ್ಯರಾಗಿ ಉತ್ತಮ ಸೇವೆ ಸಲ್ಲಿಸಿದ್ದಾರೆ. ಸಂಘದ ಹಲವಾರು ಕಾರ್ಯಕ್ರಮಗಳಿಗೆ ನಿರೂಪಕರಾಗಿ ಜನಮೆಚ್ಚಿಗೆ ಪಡೆದಿದ್ದಾರೆ. ಜನಕಪುರಿ ಕನ್ನಡ ಕೂಟದ ಹಲವಾರು ನಾಟಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಹಾಗೂ ಸಮಾಜ ಸೇವಾ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ.



**ಶ್ರೀ ಶಿವಪ್ಪ ಎಂ.**
**ಸದಸ್ಯರು**

ಕಳೆದ 22 ವರ್ಷಗಳಿಂದ ದೆಹಲಿಯಲ್ಲಿ ವಾಸವಾಗಿರುವ ಇವರು ರಾಷ್ಟ್ರೀಯ ಮಾನವ ಹಕ್ಕು ಮತ್ತು ಅಧಿಕಾರಿಗಳ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಮೂಲತಃ ಚಿಕ್ಕಮಗಳೂರು ಜಿಲ್ಲೆಯ ಕಡೂರುನವರಾದ ಇವರು ಪರಿಶ್ರಮಿ ಕಾರ್ಯಕರ್ತರಾಗಿದ್ದು ರಂಗಚಟುವಟಿಕೆ ಸಂಗೀತ ಹಾಗೂ ಆಟೋಟಗಳಲ್ಲಿ ವಿಶೇಷ ಆಸಕ್ತಿ ಹೊಂದಿರುತ್ತಾರೆ.



**ಶ್ರೀಮತಿ ಶೋಭಾ ಗೌಡ**
**ಸದಸ್ಯರು**

ಮೂಲತಃ ಹಾಸನ ಜಿಲ್ಲೆಯವರಾದ ಇವರು ಕನ್ನಡ ಶಿಕ್ಷಣ ಸಂಸ್ಥೆಯ ಖಜಾಂಚಿಯಾಗಿರುವ ಶ್ರೀ ಹನುಮೇ ಗೌಡ ಅವರ ಧರ್ಮಪತ್ನಿ. ಬಿ.ಎ ಪದವೀಧರೆಯಾಗಿರುವ ಇವರು ಪ್ರಾಥಮಿಕ ಶಾಲೆಯ ಶಿಕ್ಷಕಿಯಾಗಿ ಕಾರ್ಯನಿರ್ವಹಿಸಿದ್ದಾರೆ. ಪ್ರಸ್ತುತ 'ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಷನ್'ನ ಜಂಟಿ ಕಾರ್ಯದರ್ಶಿಯಾಗಿ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.



**ಶ್ರೀ ಆರ್. ರೇಣುಕುಮಾರ್**
**ನಾಮಾಂಕಿತ ಸದಸ್ಯರು**

ಕರ್ನಾಟಕ ಸರಕಾರದ ನಿವಾಸೀ ಆಯುಕ್ತರ ಕಚೇರಿಯಲ್ಲಿ ಸಹಾಯಕ ಸಮನ್ವಯಾಧಿಕಾರಿಯಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ದೆಹಲಿ ಕರ್ನಾಟಕ ಸಂಘ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಗಳಲ್ಲಿ ಪ್ರಧಾನ ಕಾರ್ಯದರ್ಶಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇವರು ಸಂಘದ ಕಾರ್ಯದರ್ಶಿಯಾಗಿದ್ದ ಅವಧಿಯಲ್ಲಿ ಆಯೋಜಿಸಲಾಗಿದ್ದ ಬೃಹತ್ 'ದೆಹಲಿ ಉತ್ಸವ' ಸ್ಮರಣೀಯ ದಾಖಲೆಯಾಗಿದೆ. ದೆಹಲಿಯ ಕರ್ನಾಟಕ ಭವನದ ಹೌಸಿಂಗ್ ಸೊಸೈಟಿಯ ಹಾಲೀ ಅಧ್ಯಕ್ಷರಾಗಿಯೂ ಇವರ ಕೊಡುಗೆ ಅಪಾರ. ಭವನದ ಸಿಬ್ಬಂದಿಗಳ ಯೋಗಕ್ಷೇಮಕ್ಕೆ ಇದರಿಂದ ಬಹಳ ನೆರವಾಗಿದೆ. ದೆಹಲಿಗೆ ಬಂದು ಹೋಗುವ ಜನಪ್ರತಿನಿಧಿಗಳೊಂದಿಗೆ ನಿಕಟ ಸಂಬಂಧ ಹೊಂದಿರುವ ಇವರಿಂದ ಅನೇಕ ಕನ್ನಡಿಗರಿಗೆ ಸಹಾಯವಾಗಿದೆ. ಕನ್ನಡ ಮತ್ತು ಕನ್ನಡಿಗರ ಸಮಸ್ಯೆಗಳಿಗೆ ತಕ್ಷಣ ಸ್ಪಂದಿಸುವ ಇವರು ಜನಾನುರಾಗಿಯಾಗಿದ್ದಾರೆ.



**ಶ್ರೀ ಟಿ.ಎಂ. ಮೈಲಾರಪ್ಪ**
**ನಾಮಾಂಕಿತ ಸದಸ್ಯರು**

ದೆಹಲಿ ಪೋಲಿಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಇವರು ಮೂಲತಃ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ತಾವರೆಕೆರೆಯವರು. ವೃತ್ತಿಗಾಗಿ ದೆಹಲಿಗೆ ಬಂದರೂ ಪ್ರವೃತ್ತಿಯಾಗಿ ರಂಗಭೂಮಿಯಲ್ಲಿ ತೊಡಗಿಸಿಕೊಂಡು ಅನೇಕ ನಾಟಕಗಳಲ್ಲಿ ನಟಿಸಿ ನಿರ್ದೇಶಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿಗಳಾಗಿ ಮತ್ತು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಖಜಾಂಚಿಗಳಾಗಿ ಜವಾಬ್ದಾರಿಯುತ ಕೆಲಸಗಳನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದಾರೆ. ಹಿರಿಯ ರಂಗ ಕಲಾವಿದರಾಗಿರುವ ಮೈಲಾರಪ್ಪನವರು ದೆಹಲಿ ಕನ್ನಡ ಶಾಲೆಯ ಕನ್ನಡ ಮತ್ತು ಕನ್ನಡೇತರ ಮಕ್ಕಳನ್ನು ಒಟ್ಟುಗೂಡಿಸಿ ಸಂಯೋಜಿಸಿದ 'ಕಿಂದರಿ ಜೋಗಿ' ನಾಟಕ ಒಂದು ಮೈಲಿಗಲ್ಲು. ದೆಹಲಿಯ ಶ್ರೀ ಗಣೇಶ ಮಿತ್ರ ಮಂಡಳಿಯಲ್ಲಿ ಪ್ರಮುಖ ಸದಸ್ಯರಾಗಿರುವ ಇವರು ಹೊರನಾಡ ಕನ್ನಡಿಗರಿಗೆ ಚಿರಪರಿಚಿತರು.



**ಶ್ರೀಮತಿ ಸುಮಿತಾ ಮುರಗೋಡ**
**ಸದಸ್ಯರು**

ಧಾರವಾಡದಲ್ಲಿ ಜನನ. ಹಾಸನದ ಮಹಿಳಾ ಪಾಲಿಟೆಕ್ನಿಕ್‌ನಲ್ಲಿ ಡಿಪ್ಲೋಮಾ ಇನ್ ಎಲೆಕ್ಟ್ರಾನಿಕ್ಸ್ ಅಂಡ್ ಕಮ್ಯುನಿಕೇಷನ್ ಹಾಗೂ ಮೈಸೂರು ವಿಶ್ವವಿದ್ಯಾಲಯದಿಂದ ಸಮಾಜ ಶಾಸ್ತ್ರದಲ್ಲಿ ಎಂ.ಎ. 15 ವರ್ಷಗಳಿಂದ ದೆಹಲಿಯಲ್ಲಿ ವಾಸ. ದೆಹಲಿ ವಾರ್ತೆ ಪತ್ರಿಕೆಯಲ್ಲಿ ಸೇವೆ ಸಲ್ಲಿಸಿದ್ದು ಈಗ ಸ್ವಉದ್ಯೋಗ ಮಾಡುತ್ತಿದ್ದಾರೆ. ಸಂಗೀತ, ನಾಟಕ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಆಸಕ್ತಿ ಹೊಂದಿರುವ ಇವರು ದೆಹಲಿಯ ಗಂಧರ್ವ ಮಹಾವಿದ್ಯಾಲಯದಲ್ಲಿ ವಯಲಿನ್ ಸಂಗೀತ ತರಬೇತಿ ಪಡೆಯುತ್ತಿದ್ದಾರೆ. ದೆಹಲಿ ಸಾಮಾಜಿಕ ಸುಧಾರಣಾ ಪ್ರಗತಿಶೀಲ ಸಂಸ್ಥೆಯಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ.




## ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್‌ನಿಂದ ಅಭಿನಂದನೆ

**ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ವತಿಯಿಂದ ಜನವರಿ 19ರಂದು ದೆಹಲಿ ಕರ್ನಾಟಕ ಸಂಘದ 2019–21ನೇ ಸಾಲಿಗೆ ನೂತನವಾಗಿ ಚುನಾಯಿತಗೊಂಡ ಪದಾಧಿಕಾರಿಗಳು ಮತ್ತು ಸದಸ್ಯರನ್ನು ಅಭಿನಂದಿಸಿ ಶುಭ ಹಾರೈಸಲಾಯಿತು.**

*ಲೀಲಾವತಿ ಗುರುಪ್ರಸಾದ್*

# ಎಪ್ಪತ್ತನೇ ಗಣರಾಜ್ಯೋತ್ಸವ ಆಚರಣೆ

ದೆಹಲಿ ಕರ್ನಾಟಕ ಸಂಘದಲ್ಲಿ 70ನೇ ವರ್ಷದ ಗಣರಾಜ್ಯೋತ್ಸವ ದಿನಾಚರಣೆಯ ಅಂಗವಾಗಿ ಜನವರಿ 26ರಂದು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಜಿ. ಹೆಗಡೆ ಅವರು ಧ್ವಜಾರೋಹಣ ಮಾಡಿದರು. ನಮ್ಮ ದೇಶದ ಹಾಗೂ ನಮ್ಮ ಪರಂಪರೆಯ ಎಲ್ಲಾ ಮೂಲಭೂತ ಉದ್ದೇಶಗಳನ್ನು ಮುಂದಿಟ್ಟುಕೊಂಡು ಮುಂದುವರಿಯುವಂತಾಗಲಿ ಎಂದು ಹೇಳುತ್ತ ಎಲ್ಲರಿಗೂ ಗಣರಾಜ್ಯೋತ್ಸವದ ಶುಭಾಶಯಗಳನ್ನು ತಿಳಿಸಿದರು. ಇದೇ ಸಂದರ್ಭದಲ್ಲಿ ಈ ಬಾರಿಯ ಪ್ರದ್ಮಶ್ರೀ ಪ್ರಶಸ್ತಿಗೆ ಕರ್ನಾಟಕದಿಂದ ಆಯ್ಕೆಗೊಂಡ ಹೆಮ್ಮೆಯ ಕನ್ನಡಿಗರಾದ ಸರೋದ್ ಮಾಂತ್ರಿಕ ರಾಜೀವ್ ತಾರಾನಾಥ್, ಪರಿಸರ ಕಾರ್ಯಕರ್ತೆ ಸಾಲುಮರದ ತಿಮ್ಮಕ್ಕ, ಭೌತ ವಿಜ್ಞಾನಿ ರೋಹಿಣಿ ಗೋಡಬೋಲೆ, ಪುರಾತತ್ವ ಶಾಸ್ತ್ರಜ್ಞೆ ಶಾರದಾ ಶ್ರೀನಿವಾಸನ್ ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ಅಭಿನಂದನೆಯನ್ನು ಸಲ್ಲಿಸಿದರು.

ಇತ್ತೀಚೆಗೆ ಲಿಂಗೈಕ್ಯರಾದ ಕಾಯಕ, ದಾಸೋಹದ ಮೂಲಕ ಸಾವಿರಾರು ಜನರಿಗೆ ದಾರಿದೀಪವಾಗಿದ್ದ ನಡೆದಾಡುವ ದೇವರು, ಕಾಯಕ ಯೋಗಿ ಎಂದೇ ಪ್ರಸಿದ್ಧರಾದ ಸಿದ್ದಗಂಗಾ ಮಠದ ಡಾ. ಶ್ರೀ ಶಿವಕುಮಾರ ಸ್ವಾಮೀಜಿ ಅವರನ್ನು ಸ್ಮರಿಸಿದರು. ದೆಹಲಿಯ ಅನೇಕ ಕನ್ನಡದ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ, ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಮತ್ತು ದೆಹಲಿ ಕನ್ನಡ ಶಾಲೆಯಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದ ಡಾ. ಎಂ.ಎಸ್. ಮುಧೋಳ್ ಅವರನ್ನು ಸ್ಮರಿಸಲಾಯಿತು.

ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ, ಉಪಾಧ್ಯಕ್ಷೆ ಶ್ರೀಮತಿ ಜಮುನಾ ಸಿ. ಮಠದ, ಖಜಾಂಚಿ ಶ್ರೀಮತಿ ಆಶಾಲತಾ ಎಂ., ಜಂಟಿ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಸದಸ್ಯರುಗಳಾದ ಶ್ರೀ ಶಿವಪ್ಪ ಎಂ., ಶ್ರೀಮತಿ ಶೋಭ ಗೌಡ ಮೊದಲಾದವರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ರಾಷ್ಟ್ರಗೀತೆಯನ್ನು ಹಾಡಿ ಗೌರವ ಸಲ್ಲಿಸಲಾಯಿತು. ■




## ದೆಹಲಿ ಕರ್ನಾಟಕ ಸಂಘದ- ಪ್ರಕಟಣೆಗಳು

❖ ದೆಹಲಿ ಕನ್ನಡ ಸಂಪುಟ ❖ ಸಿಡಿಲಿನ ಬಡಿತ ಹಾಗೂ ಏನಿದೆ ಈ ಮುದುಕನ ಗುಟ್ಟು? ❖ ರಾಜಧಾನಿಯಲ್ಲಿ ಕರ್ನಾಟಕ ❖ ಜರ್ನಿ ಟು ವಾರ್ಧಾ–ಇಂಗ್ಲಿಷ್ ❖ ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ–ನಾಟಕ ❖ ದೇವರು ಎದ್ದು ಬಂದಾಗ–ನಾಟಕ ❖ ನಾನು–ನೀನು ಕವನ ಸಂಕಲನ ❖ ರಂಗಿನೋಕುಳಿ–ಕವನ ಸಂಕಲನ ❖ ನಮ್ಮಿಬ್ಬರ ನಡುವೆ–ಕವಿತೆಗಳು ❖ ಅಕವಿತೆ–ಕವನ ಸಂಕಲನ ❖ ನಿರಂಜನ ಕೃತಿ–ಸ್ಮೃತಿ ನಿರಂಜನ ನೀಲಾಂಜನ

## ಕರ್ನಾಟಕದ ಐವರಿಗೆ 'ಪದ್ಮಶ್ರೀ' ಪುರಸ್ಕಾರ

**ರಾಜೀವ್ ತಾರಾನಾಥ್ (ಸಂಗೀತ–ಕಲೆ), ಸಾಲುಮರದ ತಿಮ್ಮಕ್ಕ (ಸಮಾಜ ಸೇವೆ), ರೋಹಿಣಿ ಗೋಡಬೋಲೆ (ವಿಜ್ಞಾನ–ಇಂಜಿನಿಯರಿಂಗ್), ಶಾರದಾ ಶ್ರೀನಿವಾಸನ್ (ಪುರಾತತ್ವ), ಪ್ರಭುದೇವ (ಸಂಗೀತ–ನೃತ್ಯ) ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಭಾರತ ಸರಕಾರ ಈ ಬಾರಿ ಘೋಷಿಸಿದೆ. ಈ ಎಲ್ಲಾ ಸಾಧಕರಿಗೆ ದೆಹಲಿ ಕರ್ನಾಟಕ ಸಂಘ ಅಭಿನಂದನೆಯನ್ನು ಸಲ್ಲಿಸುತ್ತದೆ.**

## ಅಭಿನಂದನೆ



ಡಾ. ಎಸ್.ಎಂ. ಚಂದನಾ ಅವರು ರಾಜೀವ್ ಗಾಂಧಿ ಯುನಿವರ್ಸಿಟಿ ಆಫ್ ಹೆಲ್ತ್ ಸೈನ್ಸ್‌ನ ಸರ್ಜರಿ ವಿಭಾಗದಲ್ಲಿ 78.57% ಅಂಕ ಪಡೆದು ರಾಜ್ಯಕ್ಕೆ 7ನೇ ರ್‍ಯಾಂಕ್ ಪಡೆದಿರುತ್ತಾರೆ. ಪ್ರಸ್ತುತ ಇವರು ಮೈಸೂರಿನ ಜೆ.ಎಸ್.ಎಸ್. ಆಸ್ಪತ್ರೆಯಲ್ಲಿ ಇಂಟರ್ನ್‌ಶಿಪ್ ಮಾಡುತ್ತಿದ್ದಾರೆ. ಇವರು ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಮತ್ತು ದೆಹಲಿ ಕರ್ನಾಟಕ ಭವನದಲ್ಲಿ ಉದ್ಯೋಗಿಯಾಗಿರುವ ಶ್ರೀ ಮುನಿರಾಜ ಮತ್ತು ಶ್ರೀಮತಿ ಟಿ. ಮಂಜುಳಾ ಮುನಿರಾಜು ಅವರ ಸುಪುತ್ರಿ

ಇವರಿಗೆ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ದೆಹಲಿ ಕರ್ನಾಟಕ ಸಂಘವು ಅಭಿನಂದನೆಯನ್ನು ಸಲ್ಲಿಸುತ್ತದೆ.



# ಡಾ. ಶ್ರೀ ಶ್ರೀ ಶಿವಕುಮಾರ ಸ್ವಾಮೀಜಿ ಲಿಂಗೈಕ್ಯ

ಮಹಾನ್ ಮಾನವತಾವಾದಿ, ಮನುಕುಲದ ಮಹಾನ್ ಚೇತನ ಸಿದ್ಧಗಂಗಾ ಶ್ರೀಗಳು ಅಪಾರ ಭಕ್ತಗಣವನ್ನು ಅಗಲಿ ಲಿಂಗೈಕ್ಯರಾಗಿದ್ದಾರೆ. ಕನ್ನಡ ನಾಡಿನಲ್ಲಿ ಮಾನವೀಯತೆಯ ಮೌಲ್ಯಗಳನ್ನು ಜಗತ್ತಿಗೇ ಸಾರಿ ಹೇಳಿದ ಅದ್ವಿತೀಯ ಚೇತನವೊಂದು ಸದ್ದಿಲ್ಲದೇ ನಮ್ಮನ್ನು ತೊರೆದಿದೆ. ಸುಮಾರು ಒಂದು ತಿಂಗಳಿನಿಂದ ವಯೋಸಹಜ ತೊಂದರೆಗಳಿಂದ ನರಳುತ್ತಿದ್ದ ಶ್ರೀಗಳು ಚೆನ್ನೈನ ಆಸ್ಪತ್ರೆಯಲ್ಲಿ ಶುಶ್ರೂಶೆ ಪಡೆದು ಬಂದಿದ್ದರು. ಶತಾಯುಷಿಯಾಗಿ ಸ್ವಾಮೀಜಿ 111 ವರ್ಷಗಳ ಸಾರ್ಥಕ ಬದುಕನ್ನು ಕಂಡಿದ್ದರು.

ಶಿವಕುಮಾರ ಸ್ವಾಮೀಜಿಯವರು ಮಾಗಡಿ ತಾಲೂಕಿನ ವೀರಾಪುರದ ಶ್ರೀಯುತ ಹೊನ್ನಪ್ಪ ಮತ್ತು ತಾಯಿ ಗಂಗಮ್ಮನವರಿಗೆ ಎಪ್ರಿಲ್ 1, 1904ರಲ್ಲಿ ಶಿವಣ್ಣನವರಾಗಿ ಜನಿಸಿದರು. ಮಾಧ್ಯಮಿಕ ವಿದ್ಯಾಭ್ಯಾಸವನ್ನು ನಾಗವಲ್ಲಿಯಲ್ಲಿ ಮುಗಿಸಿ 1922ರಲ್ಲಿ ತುಮಕೂರಿನ ಪ್ರೌಢಶಾಲೆಯಲ್ಲಿ ಕಲಿತು ಮೆಟ್ರಿಕ್ಯುಲೇಷನ್ ಗಳಿಸಿದರು. 1927ರಲ್ಲಿ ಆಗಿನ ಸಿದ್ಧಗಂಗಾ ಮಠಾಧಿಪತಿಗಳಾಗಿದ್ದ ಶ್ರೀ ಉದ್ಧಾನ ಶಿವಯೋಗಿಗಳೊಂದಿಗೆ ಒಡನಾಟ ಬೆಳೆಯಿತು. ಹೆಚ್ಚಿನ ವಿದ್ಯಾಭ್ಯಾಸಕ್ಕೆ ಬೆಂಗಳೂರಿನ ಸೆಂಟ್ರಲ್ ಕಾಲೇಜಿಗೆ ಸೇರಿದರು. ಮಾರ್ಚ್ 3, 1930ರಲ್ಲಿ ಇವರು ಶ್ರೀಮಠದ ಜವಾಬ್ದಾರಿ ಹೊತ್ತು ಮುನ್ನಡೆಸಿಕೊಂಡು ಬಂದರು.

ನಡೆದಾಡುವ ದೇವರು, ಮಹಾನ್ ಸಂತ, ತ್ರಿವಿಧ ದಾಸೋಹಿ ಡಾ. ಶ್ರೀ ಶಿವಕುಮಾರಸ್ವಾಮೀಜಿ ಶಿವೈಕ್ಯರಾಗಿರುವುದು ಇಡೀ ನಾಡಿಗೆ ನೋವಿನ ಸಂಗತಿಯಾಗಿದೆ. ತುಮಕೂರು ಜಿಲ್ಲೆ ವಿಶ್ವಪ್ರಸಿದ್ಧಿಯಾಗಲು ಸಿದ್ಧಗಂಗಾ ಮಠವೇ ಕಾರಣ. ಮಠಕ್ಕೆ ವೀರಾಪುರದ ವೀರ ಶ್ರೀ ಶಿವಕುಮಾರ ಸ್ವಾಮೀಜಿಗಳು ಮಠಾಧಿಪತಿಯಾಗಿ ಸೇವೆ ಆರಂಭಿಸಿದ ನಂತರ ಸಿದ್ಧಗಂಗೆಯ ಇತಿಹಾಸವೇ ಬದಲಾಗಿ ಹೋಯಿತು. ಲಕ್ಷಾಂತರ ಬಡ, ನಿರ್ಗತಿಕ, ಅನಾಥ ಮಕ್ಕಳಿಗೆ ತ್ರಿವಿಧ ದಾಸೋಹ ನೀಡುವ ಮೂಲಕ ಅವರ ಬಾಳಿಗೆ ಬೆಳಕಾಗಿರುವ ನಡೆದಾಡುವ ದೇವರು ಶಿವಕುಮಾರ ಇಂದಿಗೂ ಭಕ್ತರ ಪಾಲಿನ ನಿಜ ದೈವ ಸ್ವರೂಪಿ. ಕಾಯಕವೇ ಕೈಲಾಸ, ನಿತ್ಯ ದಾಸೋಹ ತತ್ವದ ಕೈಂಕರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವ ಶ್ರೀಗಳು, ಒಂದು ಧರ್ಮಕ್ಕೆ ಸೀಮಿತವಾಗದೆ ಸರ್ವಧರ್ಮ, ಸಮಾಜದ ಅಭ್ಯುದಯಕ್ಕಾಗಿ ಶ್ರಮಿಸಿದ್ದರು. ದೇಶ ಮತ್ತು ಸಮಾಜದ ಪರಿವರ್ತನೆ ಬಗ್ಗೆ ಕಳಕಳಿ ಹೊಂದಿರುವ ಸ್ವಾಮೀಜಿಯವರು ಮುಂದಿನ ಪೀಳಿಗೆಯ ಬೆಳವಣಿಗೆಗೆ ಪಣತೊಟ್ಟು, ಮಠದಲ್ಲಿ ಹತ್ತು ಸಾವಿರಕ್ಕೂ ಅಧಿಕ ಮಕ್ಕಳಿಗೆ ತ್ರಿವಿಧ ದಾಸೋಹ ನೀಡಿ ಮಕ್ಕಳ ಉಜ್ವಲಗೊಳಿಸುವಲ್ಲಿ ವಿಶ್ವಕ್ಕೆ ಮಾದರಿಯಾಗಿದ್ದಾರೆ.

ಡಾ. ಶಿವಕುಮಾರ ಸ್ವಾಮೀಜಿ ಅವರಿಗೆ ದೆಹಲಿ ಕರ್ನಾಟಕ ಸಂಘದ ಶ್ರದ್ಧಾ ನಮನಗಳನ್ನು ಸಲ್ಲಿಸುತ್ತದೆ.

### ಸ್ವಾಮೀಜಿ ತತ್ವ

**'ಬೆವರು ಸುರಿಸದೆ ಒಂದು ರೀತಿಯ ಕಾಯಕ ಮಾಡದೆ ಫಲ ಅನುಭವಿಸಲು ಯಾರಿಗೂ ಹಕ್ಕಿಲ್ಲ'**

## ಸ್ವಾಮೀಜಿ ಅವರ ಬದುಕಿನ ಹಾದಿ

ಏಪ್ರಿಲ್ 1, 1907 :- ಜನನ
1930:- ಭೌತಶಾಸ್ತ್ರ ಹಾಗು ಗಣಿತಗಳನ್ನು ಐಚ್ಛಿಕ ವಿಷಯಗಳನ್ನಾಗಿ ಆಯ್ಕೆ ಮಾಡಿಕೊಂಡು ಬಿ.ಎ. ಪದವಿ.
ಮಾರ್ಚ್ 3, 1930:- ವಿರಕ್ತಾಶ್ರಮ ಪ್ರವೇಶ, ಮಠದ ಅಧ್ಯಕ್ಷರಾಗಿ ಪೀಠಾರೋಹಣ
1937:- ಶ್ರೀ ಸಿದ್ಧಲಿಂಗೇಶ್ವರ ಸಂಸ್ಕೃತ ಶಾಲೆಯನ್ನು ಸಂಸ್ಕೃತ ಕಾಲೇಜಿಗೆ ಮೇಲ್ದರ್ಜೆಗೇರಿಕೆ.
1941:- ಉದ್ಧಾನ ಸ್ವಾಮೀಜಿಗಳ ಕಾಲವಾದ ನಂತರ ಶ್ರೀ ಸಿದ್ಧಗಂಗಾ ಮಠದ ಮಠಾಧಿಪತಿಯಾಗಿ ಪದೋನ್ನತಿ.
1965:- ಧಾರವಾಡದ ಕರ್ನಾಟಕ ವಿವಿಯಿಂದ ಪಿ.ಎಚ್.ಡಿ. ಗೌರವ.
2007:- ಕರ್ನಾಟಕ ರತ್ನ ಗೌರವಕ್ಕೆ ಭಾಜನ. ಶ್ರೀಗಳ ಗೌರವಾರ್ಥ ಶಿವಕುಮಾರ ಸ್ವಾಮೀಜಿ ಪ್ರಶಸ್ತಿ ಘೋಷಣೆ.
ಏಪ್ರಿಲ್ 2007:- ಜನ್ಮಶತಾಬ್ಧಿ
2015:- ಭಾರತ ಸರಕಾರದಿಂದ ಪದ್ಮಭೂಷಣ ಗೌರವ
ಜನವರಿ 21, 2019:- ಲಿಂಗೈಕ್ಯ




# ರಾಜಧಾನಿಯಲ್ಲಿ ಬಸವರಾಜ ಕಟ್ಟೀಮನಿ ಜನ್ಮಶತಮಾನೋತ್ಸವ

ಕೇಂದ್ರ ಸಾಹಿತ್ಯ ಅಕಾಡೆಮಿ ಹಾಗೂ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ ಮತ್ತು ದೆಹಲಿ ಕರ್ನಾಟಕ ಸಂಘದ ಸಂಯುಕ್ತ ಆಶ್ರಯದಲ್ಲಿ ಇದೇ ಜನವರಿ 31ರಂದು ಬಸವರಾಜ ಕಟ್ಟೀಮನಿ ಜನ್ಮಶತಮಾನೋತ್ಸವ ವಿಚಾರಗೋಷ್ಠಿ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ನೂತನ ಆಡಳಿತ ಮಂಡಳಿಯ ಮೊದಲ ಕಾರ್ಯಕ್ರಮವಾದ ಈ ವಿಚಾರಗೋಷ್ಠಿಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಜಿ. ಹೆಗಡೆ ಅವರು ಉದ್ಘಾಟಿಸಿದರು. ಸಂಘ ಈ ಹಿಂದೆ ಕುವೆಂಪು ಶತಮಾನೋತ್ಸವ ದ.ರಾ ಬೇಂದ್ರೆ, ಗೌರೀಶ್ ಕಾಯ್ಕಿಣಿ ಅವರ ಜನ್ಮ ಶತಾಬ್ದಿ ಕಾರ್ಯಕ್ರಮವನ್ನು ಕೇಂದ್ರ ಸಾಹಿತ್ಯ ಅಕಾಡೆಮಿಯ ಜೊತೆ ಸೇರಿ ಆಚರಿಸಿತ್ತು. ಆಗ ಜಯಂತ್ ಕಾಯ್ಕಿಣಿ ಅವರೂ ಉಪಸ್ಥಿತರಿದ್ದುದನ್ನು ನೆನೆದ ಅಧ್ಯಕ್ಷರು ನಮ್ಮಲ್ಲಿ ಮರುಚಿಂತನೆಗೆ ಒಳಪಡದ ಇನ್ನೂ ಸಾಕಷ್ಟು ಸಾಹಿತಿಗಳಿದ್ದಾರೆ. ಇವರುಗಳ ಬಗ್ಗೆ ಪ್ರತಿಷ್ಠಾನಗಳು ಈ ರೀತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡರೆ ಹೊರನಾಡಿನ ಸಾಹಿತ್ಯಾಸಕ್ತರಿಗೆ ಹಿರಿಯ ಸಾಹಿತಿಗಳ ಸಾಧನೆಯ ಪರಿಚಯ ಮಾಡಿದಂತಾಗುತ್ತದೆಂದು ಅಭಿಪ್ರಾಯಪಟ್ಟರು. ಎಷ್ಟೆಲ್ಲಾ ತೊಂದರೆಗಳಲ್ಲಿಯೂ ಕಟ್ಟೀಮನಿ ಅವರು ಬೆಳಿಗ್ಗೆ ತಿಂಡಿತಿಂದು ತಯಾರಾಗಿ ನಿರ್ದಿಷ್ಟವಾದ ವೇಳೆಯಲ್ಲಿ ಬರವಣಿಗೆಗೆ ಕೂರುತ್ತಿದ್ದರು. ಈ ರೀತಿಯ ಶಿಸ್ತನ್ನು ಅವರು ಪಾಲಿಸದಿದ್ದರೆ 10,500 ಪುಟಗಳಿರುವ ಸಮಗ್ರ ಸಂಪುಟವನ್ನು ಹೊರತರಲು ಸಾಧ್ಯವಾಗುತ್ತಿರಲಿಲ್ಲ ಎಂದರು.

ರಾಷ್ಟ್ರದ ರಾಜಧಾನಿಯಲ್ಲಿ ಬಸವರಾಜ ಕಟ್ಟೀಮನಿ ಜನ್ಮಶತಮಾನೋತ್ಸವ ಉದ್ಘಾಟನೆಗೊಳ್ಳುತ್ತಿರುವುದಕ್ಕೆ ಸಂತಸ ವ್ಯಕ್ತಪಡಿಸಿದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಹಿರೇಮಠ ಅವರು 1942ರ ಚಲೇ ಜಾವ್ ಚಳವಳಿ, ಕರ್ನಾಟಕ ಏಕೀಕರಣ, ಗೋಕಾಕ ಚಳವಳಿಯಲ್ಲಿ ಸಕ್ರಿಯವಾಗಿದ್ದ ಬಸವರಾಜ್ ಕಟ್ಟೀಮನಿ ಪ್ರಗತಿಪರ ಸಾಹಿತ್ಯದ ಪ್ರವರ್ತಕರಲ್ಲಿ ಒಬ್ಬರು. ಸಾಮಾಜಿಕ ಬದ್ಧತೆಯುಳ್ಳವರು. 'ಚಿಮಣಿ ಎಣ್ಣೆಗೂ ಬಡತನವಿದ್ದ ಮನೆಯಲ್ಲಿ ಚಿಮಣಿಬುಡ್ಡಿ ಹಚ್ಚಲೂ ತಂದೆ ಬೈದರೆ, ತಾಯಿ ಓದಲಿ ನನ್ನ ಮಗ, ನಾಳೆ ಅವನ ಪುಸ್ತಕಗಳನ್ನು ಜನ ಓದುತ್ತಾರೆ' ಎಂದು ಪ್ರೋತ್ಸಾಹಿಸುತ್ತಿದ್ದಳಂತೆ. ಅವರಿಗೆ ತಾಯಿಯೇ ಮುಖ್ಯ ಪ್ರೇರಣೆಯಾಗಿದ್ದರು. ಕೇವಲ ಮೆಟ್ರಿಕ್ ಓದಿದ ಕಟ್ಟೀಮನಿ ಅವರಿಗೆ ಜೀವನದ ಅನುಭವಗಳೇ ಬಯಲು ಪಾಠಶಾಲೆಗಳಾಗಿದ್ದವು. ಬೆಳಗಾಂ ಜಿಲ್ಲೆಯ ಗೋಕಾಕದ ಪುಟ್ಟ ಹಳ್ಳಿ ಮಳವಳ್ಳಿಯಲ್ಲಿ ಬಡ ರೈತ ಕುಟುಂಬದಲ್ಲಿ ಜನಿಸಿದವರು. 7ನೇ ತರಗತಿಗೆ ಸಾಕಷ್ಟು ಸಾಹಿತ್ಯದ ಕೃತಿಗಳನ್ನು ಪರಿಚಯ ಮಾಡಿಕೊಂಡಿದ್ದರು. ಕನಕದಾಸರು, ವಾಸುದೇವಾಚಾರ್ಯ, ಮಾಸ್ತಿ, ಕುವೆಂಪು ಅವರ ಕಥೆ–ಕಾದಂಬರಿಗಳನ್ನು ಅವರು 7ನೇ ತರಗತಿಗೆ ಬರುವಷ್ಟರಲ್ಲೇ ಓದಿ ಮುಗಿಸಿದ್ದರು. ಕಡುಬಡತನ, ಹೊಟ್ಟೆಪಾಡು, ಜೀವನೋಪಾಯಕ್ಕಾಗಿ ಸದಾ ಅಲೆಮಾರಿಗಳಾಗಿದ್ದ ಅವರು ಹತ್ತು ಹಲವು ಪತ್ರಿಕೆಗಳಲ್ಲಿ ದುಡಿದರು, ಪತ್ರಿಕಾ ವೃತ್ತಿಯನ್ನೂ ಮಾಡಿದರು. ಬದುಕಿನ 50 ವರ್ಷಗಳಲ್ಲಿ 40ವರ್ಷ ಹೋರಾಟಗಳಲ್ಲಿಯೇ ಕಳೆದ ಬಸವರಾಜ ಕಟ್ಟೀಮನಿ ಕನ್ನಡ ಸಾಹಿತ್ಯಕ್ಕೆ ಗಣನೀಯವಾದ ಕೊಡುಗೆಯನ್ನು ನೀಡಿದ್ದಾರೆ. 1968ರಲ್ಲಿ ಅವರನ್ನು ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರನ್ನಾಗಿ ಮಾಡಿದುದು ಎಲ್ಲಾ ಲೇಖಕರಿಗೆ ಸಂದ ಗೌರವ. 'ಕಟ್ಟೀಮನಿ ವಾಚಿಕೆ' ಅಂತ ಅವರ ಆಯ್ದ ಬರೆಹಗಳ ಪುಸ್ತಿಕೆಯನ್ನು ಈಗಿನ ತಲೆಮಾರಿನವರ ಓದಿಗಾಗಿ ಸಿದ್ಧವಾಗುತ್ತಿದೆ. ಕಟ್ಟೀಮನಿ ಮತ್ತವರ ಸಮಕಾಲೀನ ಸಾಹಿತಿಗಳ ಸಾಹಿತ್ಯದ ಮರು ಓದು ಇಂದಿನ ಅಗತ್ಯ. ಅದನ್ನು ಮುನ್ನೆಲೆಗೆ ತರಬೇಕಿದೆ, ಚರ್ಚೆಗೆ ತರಬೇಕಿದೆ. ಸಾಹಿತ್ಯ ಅಕಾಡೆಮಿ 'ಜ್ವಾಲಾಮುಖಿ' ಮತ್ತು 'ಮಾಡಿ ಮಡಿದವರು' ಈ ಎರಡು ಕಾದಂಬರಿಗಳನ್ನಾದರೂ ಹಿಂದಿ–ಮತ್ತಿತರ ಭಾಷೆಗಳಿಗೆ ಅನುವಾದ ಮಾಡಿಸಬೇಕೆಂದು ಕೋರುತ್ತೇನೆ ಎಂದರು.

ಬಸವರಾಜ ಕಟ್ಟೀಮನಿ ಪ್ರತಿಷ್ಠಾನದ ಕಾರ್ಯದರ್ಶಿ ಎಸ್. ಐ. ಕರಿಶಂಕರಿ ಅವರು ಉದ್ಘಾಟನಾ ಸಮಾರಂಭದ ಕೊನೆಗೆ ವಂದನಾರ್ಪಣೆಗಳನ್ನು ಸಲ್ಲಿಸಿದರು.

ನಂತರದ ಗೋಷ್ಠಿಯಲ್ಲಿ ಪ್ರಗತಿಶೀಲ ಸಾಹಿತ್ಯ ಮತ್ತು ಕಟ್ಟೀಮನಿ ಕುರಿತು ವಿಷಯ ಮಂಡಿಸಿದ ಡಾ. ಸರಜೂ ಕಾಟ್ಕರ್ ಅವರು 'ಸಾಹಿತ್ಯವೆಂದರೆ ಹರಿಯುವ ನೀರು. ಸಾಹಿತ್ಯ ಹೇಗಿರಬೇಕೆಂದರೆ ಜನರಿಗೆ, ಸಮಾಜಕ್ಕೆ ಹಿತವಾಗುವಂಥದ್ದಿರಬೇಕು. 13ನೇ ಶತಮಾನದಲ್ಲಿನ ರಾಘವಾಂಕ ನಾನೇಕೆ ಬರೆಯುತ್ತೇನೆ ಅಂದರೆ ಜನರ ಬದುಕು ಹಸನಾಗಿರಲೆಂದು ಬರೆಯುತ್ತೇನೆ' ಎಂಬ ಮಾತುಗಳನ್ನು ಉಲ್ಲೇಖಿಸಿದ ಅವರು ಬಸವರಾಜ ಕಟ್ಟೀಮನಿ ಅವರು ಬರೆಯುವ ಕಾಲಘಟ್ಟ ಹೇಗಿತ್ತೆಂದರೆ ಮೊದಲನೇ ಮಹಾಯುದ್ಧ ಮುಗಿದು ಎರಡನೇ ಮಹಾಯುದ್ಧಕ್ಕೆ ನಾಂದಿಯಾಗುತ್ತಿದ್ದ ಕಾಲ. ಜಗತ್ತಿನ ಬಗೆಗೆ ಜನರಿಗಿದ್ದ ನಂಬುಗೆಗಳೆಲ್ಲ ಮುರಿದುಬಿದ್ದು ಇಡೀ ಜಗತ್ತಿನಲ್ಲಿ ಒಂದು ರೀತಿಯ ನಿರ್ವಾತ ಸೃಷ್ಟಿಯಾಗಿತ್ತು. ಫ್ಯಾಸಿಸ್ಟ್ ಶಕ್ತಿಗಳು ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಿದ್ದ ಸಂದರ್ಭವಾಗಿತ್ತು. ಆಗ ಸಾಹಿತ್ಯ ಬರೀ ಕಲೆಗಾರಿಕೆಯಲ್ಲ, ಜೀವನಕ್ಕಾಗಿ ಸಾಹಿತ್ಯ ಬೇಕು, ಜನರಿಗೆ ಬೇಕಾದಂಥ ಸಾಹಿತ್ಯದ ನಿರ್ಮಾಣ ಆಗಬೇಕು ಅನ್ನೋ ಚಿಂತನೆಗಳು ಮುನ್ನೆಲೆಗೆ ಬರುತ್ತವೆ. 1930ರಲ್ಲಿ ಸಜ್ಜಾದ ಝಹೀರ್‌ರಂಥ

ಪ್ರಸಿದ್ಧ ಉರ್ದು ಲೇಖಕರು ಭಾರತಕ್ಕೆ ಪ್ರಗತಿಶೀಲ ವಿಚಾರಗಳನ್ನು ತೆಗೆದುಕೊಂಡು ಬರುತ್ತಾರೆ. ಆಗಲೇ ಯುರೋಪಿನಲ್ಲಿ ಗಾರ್ಕಿಯಂಥ ಫ್ರೆಂಚ್ ಸಾಹಿತಿಗಳೆಲ್ಲ ಸೇರಿ ಜಗತ್ತಿಗೆ ಬೇಕಾದಂಥ ಸಾಹಿತ್ಯ ನಿರ್ಮಾಣದಲ್ಲಿ ತೊಡಗಿಕೊಂಡಿರುತ್ತಾರೆ. 1936ರಲ್ಲಿ ಇಂಡಿಯನ್ ಪ್ರೊಗ್ರೆಸಿವ್ ರೈಟರ್ಸ್ ಅಸೋಸಿಯೇಷನ್ ಜನ್ಮ ತಾಳುತ್ತದೆ. ಲಕ್ನೋದಲ್ಲಿ ನಡೆದ ಮೊದಲ ಸಭೆಯನ್ನು ಮುನ್ಷಿ ಪ್ರೇಮಚಂದ್ ಉದ್ಘಾಟಿಸುತ್ತಾರೆ. ರವೀಂದ್ರನಾಥ್ ಟ್ಯಾಗೋರ್‌ರಂಥ ಮೇರು ಕವಿಯಲ್ಲದೇ ಹಮೀದ್ ಅಖ್ತರ್, ಫೈಜ್ ಅಹ್ಮದ್ ಫೈಜ್, ಅಹಮದ್ ನದೀದ್ ಕಾಸ್ಮಿ, ಸದ್ದತ್ ಹಸನ್ ಮಂಟೊ ಮತ್ತು ಇಸ್ಮತ್ ಚುಗತಾಯಿ ಮುಂತಾದ ಅನೇಕ ಉರ್ದು ಕವಿಗಳು ಭಾಗವಹಿಸಿರುತ್ತಾರೆ. ಇದೇ ರೀತಿ 1943ರಲ್ಲಿ ಇಂಡಿಯನ್ ಪೀಪಲ್ಸ್ ಥಿಯೇಟರ್ ಅಸೋಸಿಯೇಷನ್ **(IPTA)**– ಕೆ.ಎ. ಅಬ್ಬಾಸ್, ಕೈಫಿ ಆಜ್ಮಿ, ಭೀಷ್ಮ ಸಹಾನಿ, ಮುಲ್ಕರಾಜ್ ಆನಂದ ಮುಂತಾದವರ ನೇತೃತ್ವದಲ್ಲಿ ಹುಟ್ಟಿಕೊಳ್ಳುತ್ತದೆ.

ಈ ಉರ್ದು ಮತ್ತು ಹಿಂದಿ ಸಾಹಿತ್ಯದ ಹೊಸಗಾಳಿ ಕನ್ನಡ ಮತ್ತು ಇತರ ಭಾಷೆಗಳನ್ನು ತಲುಪಲು ಹೆಚ್ಚು ಕಾಲ ಹಿಡಿಯಲಿಲ್ಲ. ಮೊದಲ ಪ್ರಗತಿಶೀಲ ಸಾಹಿತ್ಯ ಸಮ್ಮೇಳನಕ್ಕೆ ಶ್ರೀರಂಗರು ಮುಂಬೈಗೆ ಹೋಗುತ್ತಾರೆ. ನಿರಂಜನ, ಶಿವರಾಮ ಕಾರಂತ, ಗೋಕಾಕ್, ಅನಕೃ, ಕೋ. ಚೆನ್ನಬಸಪ್ಪ, ಪಾಟೀಲ ಪುಟ್ಟಪ್ಪ, ಬಸವರಾಜ ಕಟ್ಟೀಮನಿ, ಚದುರಂಗ, ದೇವುಡು ಮುಂತಾದ ಕನ್ನಡದ ಬರಹಗಾರರು ಪ್ರಗತಿಶೀಲ ಚಳವಳಿಗೆ ಬಹುದೊಡ್ಡ ಕೊಡುಗೆಯನ್ನು ನೀಡಿದ್ದಾರೆ. ಆನಂತರ ತಣ್ಣಗಾಗಿದ್ದ ಪ್ರಗತಿಶೀಲ ಚಳವಳಿಯನ್ನು 1976ರಲ್ಲಿ ಮತ್ತೆ ಹುಟ್ಟುಹಾಕಿದ್ದು ಬಸವರಾಜ ಕಟ್ಟೀಮನಿ ಅವರು. ಮತ್ತೆ ಬಂಡಾಯದ ಹೊಸ ಅಲೆ ಬೀಸತೊಡಗಿತ್ತು. ಕಟ್ಟೀಮನಿ ಅವರ ಬರೆಹವೆಂದರೆ ಹರಿತವಾದ ಗರಗಸವಿದ್ದಂತೆ. ಅದು ಹೋಗುತ್ತಲೂ ಕೊಯ್ಯುವುದು ಬರುತ್ತಲೂ ಕೊಯ್ಯುವುದು ಎಂದು ನೆನೆದ ಸರಜೂ ಕಾಟ್ಕರ್–ಧಾರ್ಮಿಕ ವಲಯವನ್ನೇ ಅಲ್ಲೋಲ ಕಲ್ಲೋಲಗೊಳಿಸಿದ್ದ 'ಜರತಾರಿ ಜಗದ್ಗುರು'ದಂಥ ಕೆಲ ಕೃತಿಗಳ ಬಗ್ಗೆ ತಮ್ಮ ನೆನಪುಗಳನ್ನು ಹಂಚಿಕೊಂಡರು.

ಕಟ್ಟೀಮನಿಯವರ ಕಾದಂಬರಿಗಳಲ್ಲಿ ಸಾಮಾಜಿಕ ಸಂಘರ್ಷದ ಬಗ್ಗೆ ಮಾತಾನಾಡಿದ ಡಾ. ಬಸವರಾಜ ಸಾದರ ಅವರು ಬಸವರಾಜ್ ಕಟ್ಟೀಮನಿ ಅವರ ಕಾದಂಬರಿಗಳನ್ನು ಕುರಿತು ಪಿ.ಎಚ್.ಡಿ. ಮಾಡಿ ಡಾಕ್ಟರೇಟ್ ಪಡೆದಾಗ ಸ್ವತಃ ಅವರ ಮನೆಗೆ ಹೋಗಿ ಸಿಹಿಕೊಟ್ಟು ಬರೋಣವೆಂದು ಅವರ ಮನೆ ಹತ್ತಿರವೇ ಇದ್ದ ಚನ್ನವೀರ ಕಣವಿ ಮತ್ತು ಶಾಂತಿನಾಥ ದೇಸಾಯಿ ಅವರೊಂದಿಗೆ ಹೋದರಂತೆ. ಆಗ ಕಟ್ಟೀಮನಿ ಅವರ ಕಣ್ಣಂಚಿನಲ್ಲಿ ಹನಿಗೂಡಿ 'ಕಟ್ಟೀಮನಿಗೆ ಡಾಕ್ಟರೇಟ್ ಸಿಗದಿದ್ದರೂ ಅವನ ಕಾದಂಬರಿಗಳ ಬಗೆಗೆ ಮಾಡಿದ ಅಧ್ಯಯನಕ್ಕಾದರೂ ಡಾಕ್ಟರೇಟ್ ಬಂತಲ್ಲ! ಅಷ್ಟಾದರೂ ಸಾಕು' ಎಂದು ಗದ್ಗದಿತರಾಗಿ ನುಡಿದರಂತೆ. ಈ ಘಟನೆಯನ್ನು ಮೆಲುಕು ಹಾಕಿದ ಬಸವರಾಜ್ ಸಾದರ ಕಟ್ಟೀಮನಿ ಅವರಲ್ಲಿ ನೋವು, ವಿಷಾದ ಸ್ಥಾಯಿಯಾಗುಳಿದುದನ್ನು ಆರ್ದ್ರವಾಗಿ ನೆನೆದರು. ಇದಕ್ಕೆ ಕಾರಣ ಸಾಹಿತ್ಯ ಲೋಕದ ಜಾತಿ ರಾಜಕಾರಣದಿಂದಾಗಿಯೂ ಅವರಿಗೆ ಸಿಗಬೇಕಾದ ತಕ್ಕ ಸ್ಥಾನಮಾನಗಳು ಸಿಗಲಿಲ್ಲ. ಒಂದು ಹಂತದಲ್ಲಂತೂ ಅವರು ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಾಗಿ, ಕರ್ನಾಟಕ ವಿ.ವಿ.ಯ ಗೌರವ ಡಾಕ್ಟರೇಟ್‌ಗಾಗಿ ತುಂಬಾ ನಿರೀಕ್ಷೆ ಇಟ್ಟುಕೊಂಡು ಕೂತಿದ್ದರು. ಸಾಹಿತ್ಯದ ರಾಜಕಾರಣ ಎಷ್ಟು ಕೆಟ್ಟದ್ದು ಅಂದರೆ ಕಟ್ಟೀಮನಿ ಅವರಿಗೆ ಏನೂ ಸಿಗಲಿಲ್ಲ. ಕಟ್ಟೀಮನಿ ಮುಂಗೋಪಿ, ಕಡುಗೋಪಿಯಾಗಿದ್ದರೂ ಅಂತಃಕರಣವುಳ್ಳವರಾಗಿದ್ದರು.

ಒಮ್ಮೆ ಬಡ ಭಿಕ್ಷುಕಿಯ ಸೀರೆ ಹರಿದಿದ್ದನ್ನು ಕಂಡ ಕಟ್ಟೀಮನಿ ಆಕೆಯನ್ನು ಕರೆದು–"ಹೋಗಿ ಹೊಸ ಸೀರೆ ತಗೋಳಮ್ಮ" ಎಂದು ನೂರು ರೂಪಾಯಿ ಕೊಡುತ್ತಾರಂತೆ. ಅಂಥ ಕಟ್ಟೀಮನಿ ಅವರನ್ನು ಹೇಗೆ ನಡೆಸಿಕೊಂಡಿದೆ ಸಾಹಿತ್ಯಲೋಕವೆಂದಾಗ ನೋವಾಗುತ್ತದೆ. ಬಂಡಾಯದ ಧೋರಣೆ ಸಾಹಿತ್ಯ ಸಿದ್ಧಾಂತವಾಗಿ ಬರಬೇಕಾಗಿಲ್ಲ, ಅದು ಬದುಕಿನ ಧೋರಣೆಯಾಗಿ ಹೊಮ್ಮಬೇಕು. ಸಂಘರ್ಷವೆನ್ನುವುದನ್ನು ಧೋರಣೆಯಾಗಿ ಘೋಷಣೆಯಾಗಿ ಬಳಸದೇ ಸಂಘರ್ಷವೆನ್ನುವುದು ಸಂವೇದನೆಯಾಗಬೇಕು, ಹಾಗೆ ಬಸವರಾಜ್ ಕಟ್ಟೀಮನಿ ಬರೆದಂತೆ ಬದುಕಿದರು ಎಂದು ಬಸವರಾಜ್ ಸಾದರ ಅಭಿಪ್ರಾಯಪಟ್ಟರು.

ಸ್ವಾತಂತ್ರ್ಯ ಚಳವಳಿ ಮತ್ತು ಕಟ್ಟೀಮನಿ ಕುರಿತು ವಿಷಯ ಮಂಡಿಸಿದ ವಿಜಯಕುಮಾರ್ ಕಟಗಿಹಳ್ಳಿಮಠ ಅವರು ಬಸವರಾಜ ಕಟ್ಟೀಮನಿ ಅವರ ಮೇಲೆ ತಾಯಿಯ ಪ್ರಭಾವ ಗಾಢವಾಗಿತ್ತೆಂದರು. ನಾವು ಬೇರೆಯರವನ್ನು ವಿರೋಧಿಸಬಾರದು ನಮಗೆ ಯಾರಾದರೂ ವಿರೋಧ ಮಾಡಿದಾಗ ಸುಮ್ಮನೇ ಬಿಡಬಾರದು ಎಂಬುದಾಗಿ ಅವರ ತಾಯಿ ಹೇಳುತ್ತಿದ್ದರು. ರೊಟ್ಟಿ ಬಡದು, ಕುಳ್ಳುಮಾರಿ, ಮಂದಿ ಮನೆಯಲ್ಲಿ ಕೆಲಸಮಾಡಿ ಆ ತಾಯಿ ಮಗನನ್ನು ಓದಿಸುತ್ತಾಳೆ. ಬ್ರಿಟಿಷರ ಕಾಲದಲ್ಲಿ ಉತ್ತರ ಕರ್ನಾಟಕ ಮುಂಬೈ ಪ್ರೆಸಿಡೆನ್ಸಿಯಲ್ಲಿತ್ತು. ಆ ಭಾಗವನ್ನು ಮುಂಬೈ ಕರ್ನಾಟಕವೆನ್ನುತ್ತಿದ್ದರು. ಆಗ ಮೈಸೂರಿನವರು ನಮ್ಮನ್ನು ಬ್ರಿಟಿಷ ಕರ್ನಾಟಕದವರೆನ್ನುತ್ತಿದ್ದರಂತೆ. ಕಟ್ಟೀಮನಿ ಅವರಿಗೆ ಬಹಳ ಕೋಪಬರುತ್ತಿತ್ತು. ಬ್ರಿಟಿಷರೆ ಭಾರತ ಬಿಟ್ಟು ತೊಲಗಿ ಅಂತ ತಾವೇ ಸ್ವತಃ ಕರಪತ್ರಗಳನ್ನು ಬರೆದು ಹಂಚುತ್ತಿದ್ದರು. ಘೋಷಣೆಗಳನ್ನು ಕೂಗುತ್ತಿದ್ದರು. ಕಟ್ಟೀಮನಿ ಅವರ ಕಾದಂಬರಿಯ ಒಂದು ಪಾತ್ರ ಹೇಳುತ್ತದೆ– ಸ್ವಾತಂತ್ರ್ಯ ಬಂದಿದ್ದು ಒಬ್ಬ ಗಾಂಧಿಯಿಂದಲ್ಲ. ಸ್ವಾತಂತ್ರ್ಯ ಬಂದಿದ್ದು ಪ್ರತಿ ಹಳ್ಳಿ ಹಳ್ಳಿಯ ಯುವಕರಿಂದ ಬ್ರಿಟಿಷರು ಹೆದರಿ ದೇಶಬಿಟ್ಟು ಹೋಗಿದ್ದು ಎಂದು ನೆನೆಪಿಸಿಕೊಂಡರು.

ಇನ್ನೊಂದು ಕಾದಂಬರಿಯ ಹೇಮಾ ಅನ್ನುವ ಪಾತ್ರದ ತಂದೆ ಮದವಿ ಮಾಡಿಕೋ ಅಂದಾಗ ಆಕೆ 'ಏನು ಮದವಿ ಮದ್ವೀ ಅಂತೇರಿ, ಮದವಿ ಮಾಡಿಕೊಂಡು ಏನು ಸಾಧಿಸೋದಿದೆ? ಸ್ವಾತಂತ್ರ್ಯ ಹೋರಾಟ ಮಾಡಬೇಕು ನಾನು' ಅಂತಾಳೆ. ಆಗಿನ ಕಾಲದಲ್ಲಿ ಸಾವಿರ ಸಾವಿರ ಹೆಣ್ಣುಮಕ್ಕಳು ಸ್ವಾತಂತ್ರ್ಯ ಹೋರಾಟಕ್ಕಿಳಿದರು ಮದುವೆ ಮಾಡಿಕೊಳ್ಳಲಿಲ್ಲ. ಸಾವಿರ ಸಾವಿರ ಮಹಿಳೆಯರು ಗಾಂಧೀಜಿ ಅವರಿಗೆ ತಮ್ಮ ಬಂಗಾರದ ಒಡವೆಗಳನ್ನು ತೆಗೆದುಕೊಟ್ಟರು. ಸ್ವಾತಂತ್ರ್ಯಕ್ಕಾಗಿ ಮಹಿಳೆಯರು ಮಾಡಿದ ತ್ಯಾಗ ಬಲಿದಾನಗಳನ್ನು ನಾವಿಂದು ಮರೆಯುವಂತಿಲ್ಲ ಎಂದ ಕಟಗಿಹಳ್ಳಿ ಅವರು ಕಟ್ಟೀಮನಿ ಹೋರಾಟದ ದಿನಗಳನ್ನು ಮೆಲುಕು ಹಾಕಿದರು.

ಕೊನೆಯದಾಗಿ ಕಟ್ಟೀಮನಿ ಅವರ ಆತ್ಮಕಥೆಯ ಬಗ್ಗೆ ಮಾತನಾಡಿದ ಡಾ. ಬಸವರಾಜ್ ಡೋಣೂರ ಅವರು ಯಾವ ಹೋರಾಟಗಾರನ ಬದುಕೂ ಬಹಳ ಸಂತೋಷದಿಂದ, ಬಹಳ ನೆಮ್ಮದಿಯಿಂದ ಇರುವುದಿಲ್ಲ. ಜೀವನದಲ್ಲಿ ಒಂದೇ ಬಾರಿ ಹಾಡುತ್ತಿದ್ದ ಹಾಡು ಹಕ್ಕಿಗೆ ಹಾಡಬೇಕೆನಿಸಿ ಅರಣ್ಯದೊಳಗೆ ಹಾರುತ್ತಾ ಹಾರುತ್ತಾ ಒಂದು ಅತಿ ಎತ್ತರವಾದ ಮರದ ಮೇಲೆ ಕುಳಿತು ಹಾಡಬೇಕೆಂದಿತು. ಆ ಮರಕ್ಕೆ ಹರಿತವಾದ ದಪ್ಪ ದಪ್ಪ ಮುಳ್ಳಿದ್ದವು. ಆ ಹಕ್ಕಿ ಅತೀ ವೇಗವಾಗಿ ಹಾರುತ್ತ ಬಂದು ಆ ಮುಳ್ಳಿಗೆ




ಸಾಹಿತ್ಯ ವಿಮರ್ಶೆಗೆ 2018ರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಶ್ರೀ ಕೆ.ಜಿ. ನಾಗರಾಜಪ್ಪ ಅವರನ್ನು 31.01.2019ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಅಭಿನಂದಿಸಲಾಯಿತು.

ಎದೆಯನ್ನು ಬಡಿಯುತ್ತದೆ. ಮುಳ್ಳು ಎದೆಯನ್ನು ಸೀಳಿಹೋಗಿ ಅದು ಹಾಡತೊಡಗುತ್ತದೆ. ಎಷ್ಟು ಹಾಡುತ್ತದೆಂದರೆ ಅದು ತನ್ನ ದೇಹದ ಕೊನೆಯ ರಕ್ತದ ಹನಿ ಬೀಳುವವರೆಗೂ ಹಾಡುತ್ತದೆ. ಹೇಗೆ ಹಾಡುತ್ತದೆಂದರೆ ಆಕಾಶದಲ್ಲಿರುವ ಎಲ್ಲಾ ದೇವತೆಗಳು ಬಂದು ನೋಡಿ ಬೆರಗಾಗುವಂತೆ ಅದು ಹಾಡುತ್ತದಂತೆ. ಬಸವರಾಜ ಕಟ್ಟೀಮನಿ ಅವರನ್ನು ಹಕ್ಕಿಗೆ ಹೋಲಿಸಿದ ಡೋಣೂರು ಕಟ್ಟೀಮನಿ ಅವರೂ ಕೂಡ ತಮ್ಮ ಕೊನೆಯುಸಿರು ಇರುವವರೆಗೂ, ದೇಹದಲ್ಲಿ ಒಂದು ತೊಟ್ಟು ರಕ್ತವಿರುವವರೆಗೂ ಬರದೇ ಬರೆದರು. ಈ ಸಮಾಜದ ಶೋಷಿತರಿಗಾಗಿ, ನೊಂದವರಿಗಾಗಿ, ಅನ್ಯಾಯದ ವಿರುದ್ಧ ಅವರ ಹೋರಾಟದ ಲೇಖನಿ ಕೊನೆಯುಸಿರಿನವರೆಗೂ ನಿಲ್ಲಲಿಲ್ಲ ಎಂಬುದಾಗಿ ನುಡಿದರು.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಕವಿ ಸಿದ್ದಲಿಂಗಯ್ಯ ಅವರು ತಮ್ಮ ಹದಿಮೂರನೇ ವಯಸ್ಸಿಗೆ ಬಸವರಾಜ್ ಕಟ್ಟೀಮನಿ ಅವರನ್ನು ಓದಿದ ಸಂದರ್ಭವನ್ನು ಸ್ವಾರಸ್ಯವಾಗಿ ಬಣ್ಣಿಸಿದರು. ಕಟ್ಟೀಮನಿ ಅವರ 'ಸ್ವಾತಂತ್ರ್ಯದೆಡೆಗೆ' ಪುಸ್ತಕ ಓದಿ ತಮ್ಮ ಜೀವನವೇ ಬದಲಾಯಿತು. ಯಾಕಂದರೆ ಅದರಲ್ಲಿ ನಮ್ಮಂತಹವರ ಬಗ್ಗೆಯೇ ಬರೆದಿದ್ದರು. ಆಗಲೇ ಸಮಾಜ ಬದಲಾವಣೆಗಾಗಿ ಹೋರಾಡುವುದೇ ನಮ್ಮ ಸಮಸ್ಯೆಗಳ ಪರಿಹಾರ ಎಂದು ಅರಿವಾಯಿತು. ನಮ್ಮ ಈಗಿನ ದುರಂತವೆಂದರೆ ಬಹುಪಾಲು ಶೋಷಿತರಿಗೆ ಶೋಷಕರಾಗುವ ಹಂಬಲವೇ ಇದೆಯೇ ಹೊರತು ಸಾಮಾಜಿಕ ಪ್ರಜ್ಞೆಯಲ್ಲ, ಮಾನವೀಯ ಪ್ರಜ್ಞೆಯಾಗಲಿ, ಪಾಪ ಪ್ರಜ್ಞೆಯಾಗಲಿ ಇಲ್ಲ. ನಮಗೆ ಶೋಷಿತ ಮಾದರಿಯಾಗಬೇಕೇ, ಇಲ್ಲ ಶೋಷಕ ಮಾದರಿಯಾಗಬೇಕೆ ಎಂದು ಪ್ರಶ್ನೆಯೆತ್ತಿದ ಸಿದ್ದಲಿಂಗಯ್ಯ ದೇಶದ ಏಳಿಗಾಗಿ, ದೀನದಲಿತರ ದನಿಯಾಗಿ, ಜೀವಪರವಾಗಿ ನಿಲ್ಲುವ ಸಮಾಜವನ್ನು ಬದಲಾವಣೆ ಮಾಡಲು ಹೋರಾಡುವ ಶೋಷಿತ ನಮಗೆ ಮಾದರಿಯಾಗಬೇಕು ಎಂದು ಹೋರಾಡಿದ ಬಸವರಾಜ್ ಕಟ್ಟೀಮನಿ ಅವರು ತಮ್ಮ 'ಹೊಲೆ ಮಾದಿಗರ ಹಾಡು' ಪುಸ್ತಕ ಬಿಡುಗಡೆಯ ದಿನ ತಬ್ಬಿಕೊಂಡು ಕಣ್ಣೀರುಗರೆದಿದ್ದ ಘಟನೆಯನ್ನು ಆಪ್ಯಾಯವಾಗಿ ನೆನೆದರು.

ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಾದೇಶಿಕ ಕಾರ್ಯದರ್ಶಿ ಶ್ರೀ ಮಹಾಲಿಂಗೇಶ್ವರ ಅವರು ಸ್ವಾಗತಿಸಿದರು. ಕೇಂದ್ರ ಸಾಹಿತ್ಯ ಅಕಾಡೆಮಿಯ ಕನ್ನಡ ಸಲಹಾ ಮಂಡಳಿಯ ಸದಸ್ಯರಾದ ಶ್ರೀ ಬಾಳಾಸಾಹೇಬ ಲೋಕಾಪುರ ಅವರು ಆಶಯ ನುಡಿಗಳನ್ನಾಡಿದರು. ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಸಿ.ಎಂ. ನಾಗರಾಜ ಅವರು ಕಾರ್ಯಕ್ರಮವನ್ನು ನಿರೂಪಿಸಿದರು.

ಸಮಾರೋಪ ಸಮಾರಂಭದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ, ಪ್ರತಿಷ್ಠಾನದ ಅಧ್ಯಕ್ಷ ಮಲ್ಲಿಕಾರ್ಜುನ ಹಿರೇಮಠ ಮತ್ತು ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಸಮಾರೋಪ ಭಾಷಣದಲ್ಲಿ ಡಾ. ಪುರುಷೋತ್ತಮ ಬಿಳಿಮಲೆ ಅವರು ಸಮಕಾಲಿನ ಸಮಾಜದ ಬಿಕ್ಕಟ್ಟುಗಳ ಬಗ್ಗೆ ಚಿಂತಿಸಿದರು. ಕರಾವಳಿಯಲ್ಲಿ ಪ್ರಚಲಿತವಿರುವ ಬೊಬ್ಬರ್ಯ ಮುಸಲ್ಮಾನ ಭೂತ ಸಮುದ್ರಕ್ಕೆ ಹೋಗುವವರಿಗೆ ತೊಂದರೆಯಾಗಬಾರದೆಂದು ಕಾಯುವ ದೈವ. ಬೊಬ್ಬರ್ಯನ ಕುರಿತ ಪಾಡ್ದನಗಳಿವೆ. ಇತ್ತೀಚಿನ ಫ್ಯಾಸಿಸ್ಟ್ ಮತಾಂಧರು ಬೊಬ್ಬರ್ಯ ಮುಸ್ಲಿಮನಲ್ಲ ಅವನು ಬಬ್ರುವಾಹನನ ಅವತಾರ ಅಂತ ಬೊಬ್ಬರ್ಯನನ್ನು ಬಬ್ರುವಾಹನನನ್ನಾಗಿಸಿ ಈಗಲ್ಲೊಂದು ಗುಡಿಕಟ್ಟಿ ಪೂಜಾರಿಯನ್ನು ಕೂರಿಸಿದ್ದಾರೆ. ಹೀಗೆ ಧರ್ಮಾಂಧತೆಯೆಂಬುದು ನಮ್ಮ ಸಂಸ್ಕೃತಿಯ ಮೂಲ ಘಟಕಗಳನ್ನು ಹೇಗೆ ನಾಶ ಮಾಡುತ್ತಿದೆಯೆಂಬುದರತ್ತ ಗಮನ ಸೆಳೆದರು.

1. ಬೆಳೆಯುತ್ತಿರುವ ಕೋಮುವಾದ 2. ಉಚ್ಛ್ರಾಯಕ್ಕೆ ಬರುತ್ತಿರುವ ಜಾತಿವಾದ ಮತ್ತು 3) ನಮ್ಮ ಕಣ್ಣುಗಳ ಪಟ್ಟಿಯನ್ನು ಕಟ್ಟಿ ನಮ್ಮನ್ನು ಕುರುಡರನ್ನಾಗಿ ಮಾಡುತ್ತಿರುವ ಧರ್ಮಾಂಧತೆ. ಈ ಮೂರು ಸಮಕಾಲೀನ ವಾಸ್ತವಗಳನ್ನು ಎದುರಿಸಲಿಕ್ಕೆ, ವರ್ತಮಾನದ ಬಿಕ್ಕಟ್ಟುಗಳನ್ನು ಎದುರಿಸಲಿಕ್ಕೆ ನಮ್ಮ ಮಕ್ಕಳಿಗೆ, ನಮ್ಮ ಹೊಸತಲೆಮಾರಿಗೆ ಕಟ್ಟೀಮನಿಯವರ ಓದು ಬಹಳ ಅತ್ಯಗತ್ಯವಿದೆಯೆಂದ ಅವರು ಕಟ್ಟೀಮನಿ ಶತಮಾನೋತ್ಸದ ವಿಶೇಷವಾದ ಒಂದು ಪ್ರಾಜೆಕ್ಟ್ ತಯಾರು ಮಾಡಿ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ದಯವಿಟ್ಟು ತೆಗೆದುಕೊಂಡುಹೋಗಿ ಎಂಬ ಕಿವಿಮಾತನ್ನು ಹೇಳಿದರು.

ಕನ್ನಡ ಕಾದಂಬರಿಗೆ ಮಹಿಳೆಯರ ಕುರಿತಾಗಿ ಒಂದು ದೃಷ್ಟಿಕೋಣವಿದೆ ಗುಲ್ವಾಡಿ ವೆಂಕಟರಾವ್‌ರ 'ಇಂದಿರೆ, ಮಿರ್ಜಿ ಅಣ್ಣಾಜಿರಾಯರ' ಇಂದಿರಾಬಾಯಿ, ಈ ಎಲ್ಲ ಮಹಿಳೆಯರ ಹೆಸರೇ ಇಂದಿರಾ ಮತ್ತು ಇವರೆಲ್ಲರೂ ವಿದ್ಯಾವಂತರು. ಅನ್ಯಾಯದ ವಿರುದ್ಧ ಹೋರಾಟ ಮಾಡುವಂಥವರು. ಆ ಪರಂಪರೆಯನ್ನು ಶಿವರಾಮ ಕಾರಂತರ ಮೈ ಮನಗಳ ಸುಳಿಯಲ್ಲಿ, ಬೆಟ್ಟದ ಜೀವ, ಮೂಕಜ್ಜಿ ಕನಸುಗಳಲ್ಲಿ ಕಾಣುತ್ತೇವೆ. ಇದರ ಮುಂದುವರಿಕೆಯನ್ನು ಬಸವರಾಜ ಕಟ್ಟೀಮನಿ ಅವರಲ್ಲಿ ಕಾಣುತ್ತೇವೆ. ಮಹಿಳಾ ಪರವಾದಂಥ ದೃಷ್ಟಿಕೋನ ಕಟ್ಟೀಮನಿ ಅವರಲ್ಲಿ ಹೇಗೆ ವಿಸ್ತಾರಗೊಂಡಿದೆ? ಹೇಗೆ ಇಡೀ ಕನ್ನಡ ಪರಂಪರೆಗೆ ಜೋಡಿಸಿದರು ಅಂತ ನಮಗೆ ಹೇಳಲು ಸಾಧ್ಯವಾಗಬೇಕು. ನಿರಂಜನ, ಚದುರಂಗರಂತೆ ಕಟ್ಟೀಮನಿ ಅವರೂ ಆಕೃತಿ ಮತ್ತು ಆಶಯಗಳ ನಡುವೆ ಬಿಕ್ಕಟ್ಟುಂಟಾದಾಗ ಒಪ್ಪಂದ ಮಾಡಿಕೊಳ್ಳಲಿಲ್ಲ.

ಸ್ವಾಮಿಗಳ ವಿರುದ್ಧ ತೀರ್ಪು ಕೊಡಲು ನ್ಯಾಯಮೂರ್ತಿಗಳೇ ಹೆದರಿಕೊಳ್ಳುವ ಕಾಲದಲ್ಲಿ 'ಜರತಾರಿ ಜಗದ್ಗುರುವನ್ನು ಜನರಿಗೆ ಓದಿಸಬೇಕು. ಈ ನಿಟ್ಟಿನಲ್ಲಿ ಕನಕ ಅಧ್ಯಯನ ಪೀಠ 'ಕನಕನ ಮರುಓದು' ಎಂದು ಇನ್ನೂರು ಮಕ್ಕಳು ಮತ್ತು ಅಧ್ಯಾಪಕರನ್ನು ಸೇರಿಸಿ ಕಾರ್ಯಕ್ರಮ ಮಾಡಿದಂತೆ ಬಸವರಾಜ್ ಕಟ್ಟೀಮನಿ ಅವರ ಕೃತಿಗಳ ಮರು ಓದು ಆಗಬೇಕಿದೆ. ಕಟ್ಟೀಮನಿ ಬರೆಹ ಹೇಗೆ ಒಂದು ಫ್ಯಾಶನ್ ಆಗಿರಲಿಲ್ಲವೋ ಕಟ್ಟೀಮನಿ ಅವರ ಓದು ಒಂದು ಫ್ಯಾಶನ್ ಆಗಬಾರದು. ಕಟ್ಟೀಮನಿ ಸ್ವಾತಂತ್ರ್ಯ ಹೋರಾಟಗಾರರು. ಕತೆ ಕಾದಂಬರಿ ಬರೆದರು, ಕರಪತ್ರ ಹಂಚಿದರು, ಪ್ರಿಂಟ್ ಹಾಕುತ್ತಿದ್ದರು, ಪತ್ರಿಕೆ ಕೆಲಸ ಮಾಡುತ್ತಿದ್ದರು, ಸಮಯ ಬಂದರೆ ಘೋಷಣೆಯನ್ನೂ ಕೂಗುತ್ತಿದ್ದರು, ಸಮಾಜದಲ್ಲಿ ಆಗುತ್ತಿರುವ ಅನ್ಯಾಯವನ್ನು ವಿರೋಧಿಸುತ್ತಿದ್ದರು. ಕಟ್ಟೀಮನಿ ಅವರ ಚಟುವಟಿಕೆಗಳು ಏನೇನಿದ್ದವೋ ಅವು ತಲುಪುವಂತೆ ಹೊಸ ತಲೆಮಾರನ್ನು ಹಿಡಿಯಬೇಕಿದೆ. ನವ್ಯದ ಯಾವ ವಿಮರ್ಶಕನೂ ಇದುವರೆಗೆ ಪ್ರಗತಿಪರ ಸಾಹಿತ್ಯದ ವಿಮರ್ಶೆ ಮಾಡಿಲ್ಲ. ಕಟ್ಟೀಮನಿ ಅವರ ಹೆಸರು ಹೇಳಿಕೊಂಡು ಆತ್ಮವಂಚನೆ ಮಾಡಿಕೊಳ್ಳೋದು ಬೇಡ. ಹೊಸತಲೆಮಾರಿಗೆ ಮುಟ್ಟಬೇಕೆನ್ನುವ ನಿಟ್ಟಿನಲ್ಲಿ ವೆಬ್‌ಸೈಟ್ ಮಾಡಿ ಅವರ ಎಲ್ಲಾ ಪತ್ರಗಳನ್ನು ಹಾಕಿ ಎಲ್ಲರಿಗೂ ದಕ್ಕುವಂತೆ ಮಾಡಿ ಎಂದರು.

ಡಾ. ವೆಂಕಟಾಚಲ ಹೆಗಡೆ ವಂದನಾರ್ಪಣೆ ಸಲ್ಲಿಸುತ್ತ ಮುಂದಿನ ದಿನಗಳಲ್ಲಿ ಮಿರ್ಜಿ ಅಣ್ಣಾರಾಯರ ಕಾರ್ಯಕ್ರಮ ಹಾಗೂ ವಿಡಿಯೋ ಆರ್ಕೈವ್ ಮತ್ತು ವಿಡಿಯೋ ಲೈಬ್ರರಿಗಳನ್ನು ಮಡೋಣವೆಂಬ ಆಶಯ ನುಡಿಗಳೊಂದಿಗೆ ಕಾರ್ಯಕ್ರಮ ಸಂಪನ್ನವಾಯಿತು.

ಶರದೃತುವಿನ ತಂಪಿನ ದಿನದಲ್ಲಿ ಇಡೀ ಒಂದಿನ ಕುಳಿತು ಸಾಹಿತ್ಯದ ಚರ್ಚೆ ಮಾತು ಬಿಸಿಬಿಸಿಯಾದ ಕಾಫಿ ಜೊತೆಗಿನ ಸಾತ್ ನಮ್ಮಂತಹ ಹೊರನಾಡಿನವರಿಗೆ ಬಹಳ ಖುಷಿ ಕೊಡುವ ಕ್ಷಣಗಳು.

***ರೇಣುಕಾ ನಿಡಗುಂದಿ***



# ಕನ್ನಡ ಅಧ್ಯಯನ ಪೀಠ ಪ್ರಕಟಿಸಿದ ತುಳು ಕತೆಗಳ ಅನುವಾದ "ದ ರೈನ್ ಬಾಯ್" ಪುಸ್ತಕ ಬಿಡುಗಡೆ

ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ (ಜೆಎನ್‌ಯು) ಕನ್ನಡ ಅಧ್ಯಯನ ಪೀಠವು ಪ್ರಕಟಿಸಿದ ತುಳು ಜನಪದ ಕತೆಗಳ ಇಂಗ್ಲೀಷ್ ಅನುವಾದ "ದ ರೈನ್ ಬಾಯ್" ಪುಸ್ತಕದ ಬಿಡುಗಡೆ ಸಮಾರಂಭವು ದೆಹಲಿ ತುಳು ಸಿರಿಯ ಸಹಯೋಗದೊಂದಿಗೆ ಕಳೆದ ಜನವರಿ 26ರಂದು ಜೆಎನ್‌ಯುವಿನಲ್ಲಿ ನಡೆಯಿತು. ಜೆಎನ್‌ಯುವಿನ ಫ್ರೆಂಚ್ ಮತ್ತು ಫ್ರಾಂಕಫೋನ್ ಅಧ್ಯಯನ ಕೇಂದ್ರದ ಪ್ರೊಫೆಸರ್ ಡಾ. ಅಜಿತ್ ಕಣ್ಣ ಅವರು ಪುಸ್ತಕವನ್ನು ಬಿಡುಗಡೆಗೊಳಿಸಿದರು.




ತುಳುವಿನಂತಹ ಸುಮಾರು ಸಾವಿರ ವರ್ಷಗಳಷ್ಟು ಹಳೆಯ ಮತ್ತು ಇಂದಿಗೂ ತುಳುನಾಡಿನಲ್ಲಿ ಮತ್ತು ದೇಶವಿದೇಶಗಳಲ್ಲಿ ಸುಮಾರು ಒಂದು ಕೋಟಿಯಷ್ಟು ಜನರು ಮಾತನಾಡುವ ಭಾಷೆಯಲ್ಲಿ ಜನಪದ ಕತೆಗಳನ್ನು ಓದುವಾಗ ಸಮಾಜದ ಸುಂದರ ಚಿತ್ರಣವನ್ನು ನಾವು ಕಾಣಬಹುದು ಎಂದು ಪ್ರೊ. ಕಣ್ಣ ಅವರು ಹೇಳಿದರು. ಕತೆಗಳ ಭಾಷಾಂತರದಿಂದ ಮಾತ್ರವೇ ನಮ್ಮ ನೆಲಮೂಲದ ಸಂಸ್ಕೃತಿಯ ಪರಿಚಯವನ್ನು ವಿಶ್ವಕ್ಕೆ ಮಾಡಬಹುದು ಎಂದು ಅವರು ವಿವರಿಸಿದರು.

'ದ ರೈನ್ ಬಾಯ್' ತುಳು ಜನಪದ ಕತೆಗಳ ಇಂಗ್ಲೀಷ್ ಅನುವಾದವನ್ನು ಪ್ರೊ ಬಿ. ಸುರೇಂದ್ರ ರಾವ್ ಮತ್ತು ಪ್ರೊ. ಕೆ. ಚಿನ್ನಪ್ಪ ಗೌಡ ಅವರು ಮಾಡಿದ್ದಾರೆ. ಈ ಪುಸ್ತಕದಲ್ಲಿ ಆಯ್ದ 60 ಕತೆಗಳಿವೆ.

ಈ ಸಂದರ್ಭದಲ್ಲಿ ಹೆಸರಾಂತ ತುಳು ವಿದ್ವಾಂಸ, ಬರಹಗಾರ ಪ್ರೊ. ಗಣೇಶ್ ಅಮೀನ್ ಸಂಕಮಾರ್ ಅವರು ತುಳು ಸಂಸ್ಕೃತಿಯ ಕುರಿತು ತುಳುವಿನಲ್ಲಿ ಮಾತಾಡಿದರು. ತುಳು ಭಾಷೆಯನ್ನು ಉಳಿಸಿದರೆ ತುಳು ಸಂಸ್ಕೃತಿಯನ್ನು ಉಳಿಸಬಹುದು. ತುಳು ಬದುಕು ಎನ್ನುವುದು ಹೆಣ್ಣು ಸಂಸ್ಕೃತಿ ಮತ್ತು ಮಣ್ಣಿನ ಸಂಸ್ಕೃತಿ ಎಂದ ಅವರು ತುಳುವರನ್ನು 'ಸತ್ಯದ ಮತ್ರ'ರು ಎಂದು ಕರೆಯುತ್ತಾರೆ ಎಂದರು. ತುಳುನಾಡಿನ ಮಣ್ಣು ಸತ್ಯ, ಭಾಷೆ ಸತ್ಯ, ದೈವಗಳು ಹೇಳುವಂತೆ 'ಅಪ್ಪ ಸತ್ಯ, ಅಮ್ಮ ಸತ್ಯ, ಉಣ್ಣುವ ಅನ್ನ ಸತ್ಯ, ಕುಡಿಯುವ ನೀರು ಸತ್ಯ, ಮೇಲಿರುವ ಆಕಾಶ ಸತ್ಯ, ಸೂರ್ಯ ಚಂದ್ರರು ಸತ್ಯ' ಎಂದು ಕೊಂಡಾಡಿದ್ದಾರೆ ಎಂದರು. ತುಳು ಭಾಷೆಯ ಸತ್ವವನ್ನು ಅರಿಯಬೇಕಾದರೆ ಮೌಖಿಕ ಸಾಹಿತ್ಯವನ್ನು ಅಧ್ಯಯನ ಮಾಡಬೇಕು. ಭಾಷೆಯ ಶಕ್ತಿಯನ್ನು ಪ್ರದರ್ಶಿಸುವಾಗ ಅದರ ಗಟ್ಟಿತನವನ್ನು ಮತ್ತು ಅದರ ಸತ್ವವನ್ನು ಹೇಳಲು ಇಂದು ಜನರು ಸರಿಯಾದ ದಾರಿಯನ್ನು ಹಿಡಿಯುವುದಿಲ್ಲ ಎಂದರು.

ಆರಂಭದಲ್ಲಿ ಕನ್ನಡ ಪೀಠದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆಯವರು ತಮ್ಮ ಸ್ವಾಗತ ಭಾಷಣದಲ್ಲಿ ಪೀಠವು ಕಳೆದ ಮೂರು ವರ್ಷಗಳಲ್ಲಿ ಪ್ರಕಟಿಸಿದ ಪುಸ್ತಕಗಳ ಕುರಿತು ವಿವರಿಸಿದರು. ದೆಹಲಿ ತುಳುಸಿರಿಯ ಅಧ್ಯಕ್ಷ ಕೆ.ಆರ್. ರಾಮಮೂರ್ತಿ ಧನ್ಯವಾದಗಳನ್ನು ಅರ್ಪಿಸಿದರು.

ಇದೇ ಸಂದರ್ಭದಲ್ಲಿ ಮಂಗಳೂರಿನ ಯಕ್ಷ ಮಂಜೂಷ ತಂಡದಿಂದ ನರಕಾಸುರ ಮೋಕ್ಷ ಎಂಬ ತುಳು ಯಕ್ಷಗಾನದ ಪ್ರದರ್ಶನವು ನಡೆಯಿತು. ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ ದೆಹಲಿ ತುಳುಸಿರಿಯ ಸದಸ್ಯರಿಂದ ಭರತನಾಟ್ಯ, ಸಮೂಹ ಗಾನ, ಗಾಯನ, ನೃತ್ಯ ಕಾರ್ಯಕ್ರಮಗಳು ನಡೆಯಿತು. ದೆಹಲಿ ಕನ್ನಡ ಶಾಲೆಯ ವಿದ್ಯಾರ್ಥಿಗಳಿಂದ ತುಳು ಜಾನಪದ ಹಾಡಿಗೆ ಸಮೂಹ ನೃತ್ಯವು ನಡೆಯಿತು.

ಇದೇ ಸಂದರ್ಭದಲ್ಲಿ ತುಳು ಭಾಷೆಯ ಬಗ್ಗೆ ಸಂಪ್ರಬಂಧ ಬರೆದು ಜೆ.ಎನ್.ಯು. ವಿನಿಂದ ಎಂಫಿಲ್ ಪದವಿ ಪಡೆದ ಕುಮಾರಿ ತೇಜಸ್ವಿನಿ ಅವರನ್ನು ಅಭಿನಂದಿಸಲಾಯಿತು. ರೈನ್‌ಬಾಯ್ ಕೃತಿಯ ಮುಖಪುಟ ರಚಿಸಿದ ತರುಣ ಕಲಾವಿದ ಆನಂದ್ ಶೆಣೈ ಅವರನ್ನೂ ಹೂಗುಚ್ಛ ನೀಡಿ ಗೌರವಿಸಲಾಯಿತು. ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಪ್ರೇಕ್ಷಕರು ಭಾಗವಹಿಸಿದ್ದರು. ಕಾರ್ಯಕ್ರಮವನ್ನು ಬಾಲಕೃಷ್ಣ ನಾಯ್ಕ್ ಅವರು ನಿರೂಪಿಸಿದರು.

*ಬಾಲಕೃಷ್ಣ ನಾಯ್ಕ್ ಡಿ.*



## ಸ್ತನದ ಕ್ಯಾನ್ಸರ್ ಕುರಿತ ಅರಿವಿನ ಕಾರ್ಯಕ್ರಮ

ಸ್ನೇಹಾ ದೆಹಲಿ ಕನ್ನಡ ಲೇಡೀಸ್ ಅಸೋಸಿಯೇಶನ್ ದಿನಾಂಕ 16.01.2019ರಂದು ನಡೆದ ಮಾಸಿಕ ಸಭೆಯಲ್ಲಿ ಮ್ಯಾಕ್ಸ್ ಆಸ್ಪತ್ರೆ ದೆಹಲಿಯ ಡಾ. ಗೀತಾ, ಡಾ. ವೈಶಾಲಿ ಮತ್ತು ತಂಡವು 'ಬ್ರೆಸ್ಟ್ ಕ್ಯಾನ್ಸರ್' ಬಗ್ಗೆ ಬಹಳ ಉಪಯುಕ್ತವಾದ ಮಾಹಿತಿ ನೀಡಿದರು. ಸಭೆಯಲ್ಲಿ ಅಧ್ಯಕ್ಷೆ ಶ್ರೀಮತಿ ರಂಗಮಣಿ ರಾವ್, ಕಾರ್ಯದರ್ಶಿ ಶ್ರೀಮತಿ ರಾಜೇಶ್ವರಿ ಕಲ್ಲೂರು ಮತ್ತು ಕಾರ್ಯಕಾರಿ ಸಮಿತಿ ಪದಾಧಿಕಾರಿ ಮತ್ತು ಸದಸ್ಯೆಯರು ಉಪಸ್ಥಿತರಿದ್ದರು.

*ಲೀಲಾವತಿ ಗುರುಪ್ರಸಾದ್*

# ಎಪ್ಪತ್ತನೇ ಗಣರಾಜ್ಯೋತ್ಸವ:

# ಪಥಸಂಚಲನದಲ್ಲಿ ಗಾಂಧೀಜಿ ಮತ್ತು ಬೆಳಗಾವಿ ಕಾಂಗ್ರೆಸ್ ಅಧಿವೇಶನ ಸ್ತಬ್ಧಚಿತ್ರ




ನವದೆಹಲಿಯಲ್ಲಿ ನಡೆದ 70ನೇ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಕರ್ನಾಟಕದ "ಮಹಾತ್ಮ ಗಾಂಧೀಜಿ-ಬೆಳಗಾವಿ ಕಾಂಗ್ರೆಸ್ ಅಧಿವೇಶನ" ವಿಷಯಾಧಾರಿತ ಸ್ತಬ್ಧಚಿತ್ರವು ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು.

ಮಹಾತ್ಮ ಗಾಂಧಿಜೀಯವರ 150ನೇ ಜನ್ಮದಿನಾಚರಣೆಯ ಅಂಗವಾಗಿ ರಕ್ಷಣಾ ಮಂತ್ರಾಲಯವೇ ಈ ಬಾರಿ ಎಲ್ಲಾ ರಾಜ್ಯಗಳಿಗೂ ಮಹಾತ್ಮ ಗಾಂಧಿಜೀಯವರ ಜೀವನಾಧರಿತ ಸ್ತಬ್ಧಚಿತ್ರದ ಪರಿಕಲ್ಪನೆ ಕಳುಹಿಸುವಂತೆ ಸೂಚಿಸಿತ್ತು. ಇಲಾಖೆಯ ಕಾರ್ಯದರ್ಶಿಗಳು ಮತ್ತು ನಿರ್ದೇಶಕರನ್ನೊಳಗೊಂಡ ಸಮಿತಿಯು ವಿವಿಧ ಬಗೆಯ ನಾಲ್ಕು ವಿಷಯಗಳನ್ನೊಳಗೊಂಡ ಸ್ತಬ್ಧಚಿತ್ರದ ಮಾದರಿಗಳನ್ನು ರಕ್ಷಣಾ ಮಂತ್ರಾಲಯಕ್ಕೆ ಕಳುಹಿಸಿಕೊಟ್ಟಿತ್ತು. ಅಂತಿಮವಾಗಿ ರಕ್ಷಣಾ ಮಂತ್ರಾಲಯ ನೇಮಿಸಿದ್ದ ಸ್ತಬ್ಧಚಿತ್ರ ಆಯ್ಕೆ ತಜ್ಞರ ಸಮಿತಿಯು "ಮಹಾತ್ಮ ಗಾಂಧೀಜಿ-ಬೆಳಗಾವಿ ಕಾಂಗ್ರೆಸ್ ಅಧಿವೇಶನ" ವಿಷಯಾಧರಿತ ಸ್ತಬ್ಧಚಿತ್ರವನ್ನು ಆಯ್ಕೆ ಮಾಡಿತು ಎಂದು ಸ್ತಬ್ಧ ಚಿತ್ರದ ಕುರಿತು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪ ನಿರ್ದೇಶಕರಾದ ಬಸವರಾಜ್ ಕಂಬಿ ಅವರು ಮಾಹಿತಿ ನೀಡಿದರು.

1924ರ ಡಿಸೆಂಬರ್ 26 ಮತ್ತು 27 ರಂದು ಬೆಳಗಾವಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನ ಒಂದು ಐತಿಹಾಸಿಕ ಮಹತ್ವದ ಘಟನೆಯಾಗಿದೆ. ಏಕೆಂದರೆ ಇದು ಗಾಂಧೀಜಿಯವರು ಅಧ್ಯಕ್ಷತೆ ವಹಿಸಿದ ಏಕೈಕ ಕಾಂಗ್ರೆಸ್ ಮಹಾ ಅಧಿವೇಶನವಾಗಿದೆ. ಗಾಂಧೀಜಿಯವರ ಅಧ್ಯಕ್ಷತೆಯಲ್ಲಿ ಜರುಗಿದ ಅಖಿಲ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ 39ನೇ ಮಹಾಧಿವೇಶನಕ್ಕೆ ಕನ್ನಡ ಜನತೆಯಿಂದ ಅತ್ಯುತ್ಸಾಹದ ಪ್ರತಿಕ್ರಿಯೆ ಮತ್ತು ಬೆಂಬಲ ವ್ಯಕ್ತವಾಗಿತ್ತು.

ಕಲಾವಿದ ಶಶಿಧರ ಅಡಪ ಅವರು ಸ್ತಬ್ಧಚಿತ್ರದ ವಿನ್ಯಾಸ ಮಾಡಿದ್ದು, ಪ್ರವೀಣ್ ಡಿ. ರಾವ್ ಅವರು "ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು" ಗೀತೆಗೆ ಸಂಗೀತ ರಚನೆ ಮಾಡಿದ್ದಾರೆ. ಸ್ತಬ್ಧಚಿತ್ರದ ನಿರ್ಮಾಣ ಕಾರ್ಯಕ್ಕೆ ಜನವರಿ 5ರಂದು ಚಾಲನೆ ನೀಡಲಾಗಿತ್ತು ಎಂದು ಸ್ತಬ್ಧಚಿತ್ರದ ನಿರ್ಮಾಣದ ಸ್ಥಳೀಯ ಉಸ್ತುವಾರಿ ವಹಿಸಿದ್ದ ಕರ್ನಾಟಕ ವಾರ್ತಾ ಕೇಂದ್ರದ ವಾರ್ತಾಧಿಕಾರಿ, ಡಾ. ಮೈಸೂರು ಗಿರೀಶ್ ತಿಳಿಸಿದರು.

ಗಣರಾಜ್ಯೋತ್ಸವ ಪೆರೇಡ್‌ನಲ್ಲಿ 13 ರಿಂದ 14 ರಾಜ್ಯಗಳ ಸ್ತಬ್ಧಚಿತ್ರಗಳು ಮಾತ್ರ ಭಾಗವಹಿಸಲು ಅವಕಾಶ ಕಲ್ಪಿಸಲಾಗುತ್ತದೆ. ಈ ಬಾರಿ 30 ರಾಜ್ಯಗಳಲ್ಲಿ 14 ರಾಜ್ಯಗಳ ಸ್ತಬ್ಧಚಿತ್ರಗಳು ಮಾತ್ರ ಅಂತಿಮವಾಗಿ ಆಯ್ಕೆಗೊಂಡಿದ್ದವು. ವೈಲ್ಡ್ ಕಾರ್ಡ್

## ಸ್ತಬ್ಧಚಿತ್ರದ ವಿವರಣೆ:

ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಐತಿಹಾಸಿಕ ಅಧಿವೇಶನ ನಡೆದ ಆವರಣಕ್ಕೆ 'ವಿಜಯನಗರ' ಎಂದು ನಾಮಕರಣ ಮಾಡಲಾಗಿತ್ತು. ಅಲ್ಲದೆ ಅಧಿವೇಶನ ನಡೆದ ಸ್ಥಳದ ಪ್ರವೇಶ ದ್ವಾರವನ್ನು ಹಂಪೆಯ ವಿರೂಪಾಕ್ಷ ದೇಗುಲದ ಗೋಪುರದ ವಿನ್ಯಾಸದಲ್ಲಿ ಅಲಂಕರಿಸಲಾಗಿತ್ತು. ಅಧಿವೇಶನದಲ್ಲಿ ಭಾಗವಹಿಸಲು ಆಗಮಿಸಿದ್ದ ಪ್ರತಿನಿಧಿಗಳು ಮತ್ತು ಆಹ್ವಾನಿತರು ತಂಗಲು ಕುಟೀರಗಳನ್ನು ಬಿದಿರು ಮತ್ತು ಖಾದಿ ವಸ್ತ್ರಗಳಿಂದ ರೂಪಿಸಲಾಗಿತ್ತು. ಕುಡಿಯುವ ನೀರು ಸರಬರಾಜಿಗಾಗಿ ಹೊಸ ಬಾವಿಯೊಂದನ್ನು ನಿರ್ಮಿಸಿದ್ದು, ಅದಕ್ಕೆ 'ಪಂಪಾ ಸರೋವರ' ಎಂದು ಹೆಸರಿಡಲಾಗಿತ್ತು. ಪ್ರತಿನಿಧಿಗಳ ಊಟೋಪಚಾರದ ವ್ಯವಸ್ಥೆಗೆ ಬೃಹತ್ ಪಾಕಶಾಲೆ ನಿರ್ಮಿಸಲಾಗಿತ್ತು. ಸಮಾವೇಶದ ಇಡೀ ಪ್ರದೇಶದಲ್ಲಿ ಬೆಳಕಿನ ವ್ಯವಸ್ಥೆ ಮಾಡಲು ಮುಂಬೈನಿಂದ ಸಾವಿರಾರು ಸಂಖ್ಯೆಯಲ್ಲಿ ಲಾಟೀನ್ಗಳು ಮತ್ತು ಪೆಟ್ರೋಮ್ಯಾಕ್ಸ್ ದೀಪಗಳನ್ನು ತರಿಸಲಾಗಿತ್ತು. ನಾ.ಸೂ. ಹರ್ಡಿಕರ್ ಅವರು ತರಬೇತಿಗೊಳಿಸಿದ್ದ ಹಿಂದೂಸ್ಥಾನ್ ಸೇವಾದಳದ ಸ್ವಯಂ ಸೇವಕರು, ಪ್ರತಿನಿಧಿಗಳು ಮತ್ತು ಆಹ್ವಾನಿತರ ಸೇವೆಯ ಮೇಲುಸ್ತುವಾರಿ ವಹಿಸಿದ್ದರು. ಮಹಾತ್ಮಾ ಗಾಂಧೀಜಿಯವರು ಮಹಾಧಿವೇಶನಕ್ಕೆ ಆಗಮಿಸಿದಾಗ ಆಲಿ ಸಹೋದರರು, ಸರೋಜಿನಿ ನಾಯ್ಡು, ಜವಾಹರಲಾಲ್ ನೆಹರು, ಸರ್ದಾರ ವಲ್ಲಭ ಭಾಯಿ ಪಟೇಲ್ ಮತ್ತಿತರ ಗಣ್ಯ ನಾಯಕರು ಅವರೊಡನಿದ್ದರು. ಗಂಗಾಧರ ದೇಶಪಾಂಡೆ ಅವರ ಅಧ್ಯಕ್ಷತೆಯ ಸ್ವಾಗತ ಸಮಿತಿ ಜೊತೆಗೆ ಅಪಾರ ಸಖ್ಯೆಯಲ್ಲಿದ್ದ ಗಾಂಧೀ ಅಭಿಮಾನಿಗಳು ಮತ್ತು ಕಾರ್ಯಕರ್ತರು ಗಣ್ಯರ ಸಮೂಹವನ್ನು ಆತ್ಮೀಯತೆಯಿಂದ ಬರಮಾಡಿಕೊಂಡು ಮೆರವಣಿಗೆ ಮೂಲಕ ಕಾಂಗ್ರೆಸ್ ಶಿಬಿರಕ್ಕೆ ಕರೆದೊಯ್ದರು. ಅಧಿವೇಶನದ ಸಂದರ್ಭದಲ್ಲಿ ಕರ್ನಾಟಕ ಮತ್ತು ಕನ್ನಡ ಭಾಷೆಯ ಇತಿಹಾಸ ಮತ್ತು ಸಂಸ್ಕೃತಿಯನ್ನು ಬಿಂಬಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗಿತ್ತು. ಸಂಗೀತ ದಿಗ್ಗಜ ವೀಣೆ ಶೇಷಣ್ಣನವರ ವೀಣಾವಾದನ ಮತ್ತು ಹುಯಿಲುಗೋಳ ನಾರಾಯಣರಾವ್ ಅವರು ಕನ್ನಡ ರಾಜ್ಯೋದಯದ ಕುರಿತ 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' ಎಂಬ ಗೀತೆಯನ್ನು ಹಾಡುವ ಮೂಲಕ ಮಹಾಧಿವೇಶನಕ್ಕೆ ವಿಶೇಷ ಮೆರುಗನ್ನು ನೀಡಿದ್ದರು.

ಮೂಲಕ ಈಶಾನ್ಯ ರಾಜ್ಯದ ಮೂರು ರಾಜ್ಯಗಳಿಗೆ ಅವಕಾಶ ಕಲ್ಪಿಸಲಾಗಿ, ಒಟ್ಟು 17 ರಾಜ್ಯಗಳ ಸ್ತಬ್ಧಚಿತ್ರಗಳು ಈ ಸಾಲಿನ ಗಣರಾಜ್ಯೋತ್ಸವದ ಪಥಸಂಚಲನದಲ್ಲಿ ಭಾಗವಹಿಸಿವೆ. ಗಣರಾಜ್ಯೋತ್ಸವ ಪಥಸಂಚಲನದಲ್ಲಿ ಕರ್ನಾಟಕವು ಸತತ 10 ವರ್ಷಗಳಿಂದಲೂ ಅಂದರೆ 2010ರಿಂದ ಇಲ್ಲಿಯವರೆಗೂ ಆಯ್ಕೆಯಾಗುತ್ತಾ ಬರುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು. ಗಣರಾಜ್ಯೋತ್ಸವ ಪೆರೇಡ್‌ನಲ್ಲಿ ಇಲಾಖೆ ಸಿದ್ದಪಡಿಸಿದ್ದ ಸ್ತಬ್ಧಚಿತ್ರಗಳಲ್ಲಿ ಇಲ್ಲಿಯವರೆಗೆ 5 ಬಾರಿ ಪ್ರಶಸ್ತಿ ಸಂದಿದೆ, 2005ನೇ ಸಾಲಿನಲ್ಲಿ 'ಮಹಾಮಸ್ತಕಾಭಿಷೇಕ' ಸ್ತಬ್ಧಚಿತ್ರಕ್ಕೆ ಪ್ರಥಮ ಬಹುಮಾನ, 2008 ಸಾಲಿನ 'ಹೊಯ್ಸಳ ವಾಸ್ತುಶಿಲ್ಪ' ಸ್ತಬ್ಧಚಿತ್ರಕ್ಕೆ ದ್ವಿತೀಯ ಬಹುಮಾನ, 2011ನೇ ಸಾಲಿನ 'ಬಿದರಿ ಕಲೆ' ಸ್ತಬ್ಧಚಿತ್ರಕ್ಕೆ ದ್ವಿತೀಯ ಬಹುಮಾನ, 2012ನೇ ಸಾಲಿನ 'ಭೂತಾರಾಧನೆ' ಸ್ತಬ್ಧಚಿತ್ರಕ್ಕೆ ತೃತೀಯ ಬಹುಮಾನ ಹಾಗೂ 2015ನೇ ಸಾಲಿನ 'ಚೆನ್ನಪಟ್ಟಣದ ಆಟಿಕೆಗಳು' ಸ್ತಬ್ಧಚಿತ್ರಕ್ಕೆ ತೃತೀಯ ಬಹುಮಾನ ಲಭಿಸಿರುವ ಕುರಿತು ವಾರ್ತಾಧಿಕಾರಿ ಮಾಹಿತಿ ನೀಡಿದರು.

ಸ್ತಬ್ಧಚಿತ್ರದ ಕಲಾವಿನ್ಯಾಸಕ ಶಶಿಧರ್ ಅಡಪ ಅವರು, "ಮಹಾತ್ಮ ಗಾಂಧೀಜಿ– ಬೆಳಗಾವಿ ಕಾಂಗ್ರೆಸ್ ಅಧಿವೇಶನ" ವಿಷಯಾಧಾರಿತ ಸ್ತಬ್ಧಚಿತ್ರದಲ್ಲಿ 1924ರಲ್ಲಿ ನಡೆದ ಬೆಳಗಾವಿ ಅಧಿವೇಶನದ ಅಕ್ಷರಶಃ ವೇದಿಕೆಯನ್ನೆ ಸ್ತಬ್ಧಚಿತ್ರದಲ್ಲಿ ತಮ್ಮ ಕೈಚಳಕದಿಂದ ಮೂಡಿಸಿದ್ದಾರೆ. ಸಂಶೋಧನಾ ವಿದ್ಯಾರ್ಥಿಯಂತೆ ಪ್ರತಿಯೊಂದು ವಿಷಯಗಳಿಗೂ ಇತಿಹಾಸದ ದಾಖಲೆಗಳನ್ನು ಸಂಗ್ರಹಿಸಿ ರಕ್ಷಣಾ ಇಲಾಖೆಯ ಸ್ತಬ್ಧಚಿತ್ರದ ಆಯ್ಕೆ ಸಮಿತಿಯ ಮುಂದೆ ಪ್ರಸ್ತುತಪಡಿಸಿದರು.

ರಾಷ್ಟ್ರಧ್ವಜದ ನಿರ್ಮಾಣವೇ ರೋಚಕತೆಯಿಂದ ಕೂಡಿದೆ. ರಾಷ್ಟ್ರಧ್ವಜದ ಪರಿಕಲ್ಪನೆ ಮೊದಲ ಬಾರಿಗೆ ಬೆಳಗಾವಿ ಅಧಿವೇಶನದಲ್ಲಿ ರೂಪಗೊಂಡಿತು. ಪ್ರಸ್ತುತ ರಾಷ್ಟ್ರಧ್ವಜವು ಸತತ 16 ವರ್ಷಗಳ ನಿರಂತರ ಬದಲಾವಣೆ ಬಳಿಕ ಅಂತಿಮವಾಗಿ ಕೇಸರಿ–ಬಿಳಿ– ಹಸಿರು ಬಣ್ಣದ ತ್ರಿರಂಗ ರಾಷ್ಟ್ರಧ್ವಜ ಸಿದ್ದಗೊಂಡಿತು. ಇದನ್ನು ಸಹ ಸ್ತಬ್ಧಚಿತ್ರದಲ್ಲಿ ಚಿತ್ರಿಸಲಾಗಿದೆ.

ಸ್ತಬ್ಧಚಿತ್ರ ಅತ್ಯುತ್ತಮವಾಗಿ ಮೂಡಿಬರಲು ಇಲಾಖೆಯ ಕಾರ್ಯದರ್ಶಿಗಳು, ನಿರ್ದೇಶಕರು ಹಾಗೂ ಉಪ ನಿರ್ದೇಶಕರಾದ ಬಸವರಾಜ್ ಎಂ. ಕಂಬಿ ಅವರು ನಿರಂತರ ಮಾರ್ಗದರ್ಶನ ನೀಡಿರುತ್ತಾರೆ. ಕಲಾವಿದರಾದ ಶ್ವೇತಾ ಕೆ, ರೋಹಿಣಿ ಕೆ. ರಾಜ್, ಮಂಜುಳಾ ಎಂ.ಎಸ್ ಹಾಗೂ ಕಲಾವತಿ. ಆರ್ ಅವರು ಸ್ತಬ್ಧಚಿತ್ರದೊಂದಿಗೆ ಭಾಗವಹಿಸಿದ್ದರು.

**ಅಮರೇಶ್ .**



# 'ಶಬ್ದ ಗಾರುಡಿಗ' ಬೇಂದ್ರೆ ನೆನಪು

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು (ರಿ), ದೆಹಲಿ ಘಟಕದ ಮೂಲಕ ಆರ್.ಕೆ. ಪುರಂನ ಕರ್ನಾಟಕ ಭವನದ ವಸತಿ ಸಮುಚ್ಚಯದ ಆವರಣದಲ್ಲಿ ಇದೇ ಜನವರಿ 31ರಂದು ಹಮ್ಮಿಕೊಂಡಿದ್ದ ವರಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಅವರ 123ನೇ ಜನ್ಮದಿನ ಪ್ರಯುಕ್ತ ಮಕ್ಕಳಲ್ಲಿ ಸಾಹಿತ್ಯಾಭಿರುಚಿಯನ್ನು ಬೆಳೆಸುವ ಹಿನ್ನೆಲೆಯಲ್ಲಿ 'ಶಬ್ದ ಗಾರುಡಿಗ'ನ ನೆನಪು ಕಾರ್ಯಕ್ರಮವು ವಿಶಿಷ್ಟವಾಗಿ ನಡೆಯಿತು.

ಮುಖ್ಯ ಅತಿಥಿ ಕರ್ನಾಟಕ ಸರ್ಕಾರದ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ನವದೆಹಲಿಯ ಕರ್ನಾಟಕ ಉದ್ಯೋಗ ಮಿತ್ರದ ನಿವಾಸಿ ನಿರ್ದೇಶಕರಾದ ಶ್ರೀ ಪಿ. ಜಯರಾಜ್ ಅವರು ಮಾತಾಡುತ್ತಾ ನಮ್ಮ ಮುಂದಿನ ಭವಿಷ್ಯ ನಮ್ಮ ಮಕ್ಕಳೆ ಆಗಿದ್ದಾರೆ. ಮಕ್ಕಳಲ್ಲಿ ಭಾಷೆ ಹಾಗೂ ಸಾಹಿತ್ಯದ ಕುರಿತಾಗಿ ಆಸಕ್ತಿಯನ್ನು ಬೆಳೆಸುವಲ್ಲಿ ಇಂತಹ ಕಾರ್ಯಕ್ರಮಗಳು ಸಹಕಾರಿ. ಮಕ್ಕಳಲ್ಲಿರುವ ಪ್ರತಿಭೆಯನ್ನು ಇಂತಹ ಕಾರ್ಯಕ್ರಮಗಳ ಮೂಲಕ ಗುರುತಿಸಿ, ಆ ನಿಟ್ಟಿನಲ್ಲಿ ಪ್ರತಿಭಾವಂತರನ್ನಾಗಿ ಹಾಗೂ ಸೃಜನಶೀಲರನ್ನಾಗಿ ಮಾಡಿ ಮಕ್ಕಳ ಆಸಕ್ತಿ ಕ್ಷೇತ್ರವನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ನಾವು ಮಾಡಬೇಕಾಗಿದೆ. ಈ ನಿಟ್ಟಿನಲ್ಲಿ ದೂರದ ದೆಹಲಿದ್ದುಕೊಂಡು ಕನ್ನಡ ಭಾಷೆ, ಸಾಹಿತ್ಯದಂತಹ ಕಾರ್ಯಕ್ರಮಗಳನ್ನು ರೂಪಿಸಿಕೊಂಡು ಮಕ್ಕಳಿಂದಲೇ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಸಂತೋಷದಾಯಕವಾಗಿದೆ. ಇದೇ ರೀತಿ ಮುಂದೆಯೂ ಇಂತಹ ಹತ್ತು ಹಲವಾರು ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಮಕ್ಕಳು ಸಾಹಿತ್ಯದೆಡೆಗೆ ಒಲವು ಬೆಳಸಿಕೊಳ್ಳಲು ಶ್ರಮಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ ವಿದ್ಯಾರ್ಥಿ ಕು. ಮಹೇಶ್ ಅವರು ಮಾತನಾಡುತ್ತಾ ಸಾಹಿತ್ಯವು ಬದುಕನ್ನು ಸುಂದರಗೊಳಿಸುವುದು ಮಾತ್ರವಲ್ಲ, ಅರ್ಥಪೂರ್ಣಗೊಳಿಸುತ್ತದೆ. ಈ ನಿಟ್ಟಿನಲ್ಲಿ ಸಾಹಿತ್ಯದ ಒಲವು ಮಕ್ಕಳಲ್ಲಿ ಮೂಡಿಸುವ ಜವಾಬ್ದಾರಿ ಸಮಾಜದ ಮೇಲಿದೆ, ಜ್ಞಾನಪೀಠ ಪುರಸ್ಕೃತ ವರಕವಿ ಬೇಂದ್ರೆಯವರ ಜನ್ಮದಿನದ ಪ್ರಯುಕ್ತ ಇಂದು ಮಕ್ಕಳಲ್ಲಿ ಭಾಷೆ ಹಾಗೂ ಸಾಹಿತ್ಯದ ಅಭಿರುಚಿಯನ್ನು ಬೆಳೆಸುತ್ತಿರುವುದು ಸಂತೋಷದ ವಿಚಾರ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಬರಹಗಾರರಾದ ಶ್ರೀಮತಿ ಸುಜಾತ ಎಸ್. ಮೂರ್ತಿ, ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾದ ಅರವಿಂದ ಬಿಜೈ, ಕಾರ್ಯದರ್ಶಿ ಗಣೇಶ ಹೆಗಡೆ, ಉಪಾಧ್ಯಕ್ಷರಾದ ಎಚ್. ಎಸ್. ತೇಲಿ, ಮಹಿಳಾ ಕಾರ್ಯದರ್ಶಿ ಶ್ರೀಮತಿ ಜಿ.ಸಿ. ರಂಜಿನಿ, ಖಜಾಂಚಿ ಅಮರೇಶ, ದೆಹಲಿ ಕರ್ನಾಟಕ ಸಂಘದ ಜಂಟಿ ಕಾರ್ಯದರ್ಶಿ ಶ್ರೀಮತಿ ಪೂಜಾ ರಾವ್ ಅವರು ಉಪಸ್ಥಿತರಿದ್ದರು. ನವದೆಹಲಿಯ ಕರ್ನಾಟಕ ಭವನದ ಸಿಬ್ಬಂದಿ ವರ್ಗದವರು ಹಾಗೂ ಅವರ ಮಕ್ಕಳು ಭಾಗವಹಿಸಿದ್ದರು.

ಕು. ಕುಶಾಲ್ ಎಂ. ಮತ್ತು ಕು. ಭವ್ಯ ಕವಿತೆ ವಾಚಿಸಿದರು. ಕು. ಶ್ರೇಷ್ಠಾ ಎಚ್. ತೇಲಿ ಅವರು ಬೇಂದ್ರೆ ವ್ಯಕ್ತಿತ್ವದ ಹಾಗೂ ಶ್ರೀಮತಿ ಶಿಲ್ಪಾ ತಿಪ್ಪಣ್ಣ ಅವರು ಬೇಂದ್ರೆ ಕೃತಿಗಳ ಕುರಿತಾದ ವಿಚಾರ ಧಾರೆಯನ್ನು ಮಂಡಿಸಿದರು. ಇದೇ ಸಂದರ್ಭ ಕವಿಗೋಷ್ಠಿ, ವಿಚಾರಗೋಷ್ಠಿ ಹಾಗೂ ರಸಪ್ರಶ್ನೆ ಕಾರ್ಯಕ್ರಮಗಳು ನಡೆದವು.

ಕು. ದೀಪ್ತಿ ಚಂದ್ರಶೇಖರ್ ಅವರ ಭಾವಗೀತೆಯೊಂದಿಗೆ ಕಾರ್ಯಕ್ರಮ ಆರಂಭಗೊಂಡಿತು. ಕಾರ್ಯಕ್ರಮ ಸಂಯೋಜಕರಾದ ಶ್ರೀಮತಿ ಶಕುಂತಲಾ ಎಸ್. ನಾಯಕ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು. ಪಾರ್ವತಿ ಎಸ್. ಸ್ವಾಗತಿಸಿದರು. ಕು. ಶ್ರೇಯ ಎಚ್.ತೇಲಿ ವಂದಿಸಿದರು. ಕು. ಅಭಿಷೇಕ್ ಉಬಾಳೆ ಕಾರ್ಯಕ್ರಮ ನಿರೂಪಿಸಿದರು.

**ಅಮರೇಶ್**

# ಅಗಲಿದ ಡಾ. ಮುರಲೀಧರ ಮುಧೋಳ



ಡಾ. ಮುರಲೀಧರ ಶ್ರೀನಿವಾಸಗೌಡ (ಉರ್ಫ ಅಡವೀರಾವ) ಮುಧೋಳರು ಜನವರಿ 25ರಂದು ಗಾಜಿಯಾಬಾದ್ ಪುಷ್ಪಾಂಜಲಿ ಆಸ್ಪತ್ರೆಯಲ್ಲಿ ನಿಧನರಾದರು. ದೆಹಲಿ ಸರಕಾರದ ಎಜ್ಯುಕೇಶನ್ ಆಫೀಸರ್ ಆಗಿ ನಿವೃತ್ತರಾಗಿದ್ದ ಶ್ರೀಯುತರು ತಮ್ಮ 66 ವಯಸ್ಸಿನಲ್ಲಿ ಪತ್ನಿ, ಇಬ್ಬರು ಗಂಡು ಮಕ್ಕಳು, ಸೊಸೆ ಹಾಗೂ ಮೊಮ್ಮಗನನ್ನು ಅಗಲಿದ್ದಾರೆ. ಈಚೆಗೆ ಮುಧೋಳರು ಅನಾರೋಗ್ಯದಿಂದ ಬಳಲುತ್ತಿದ್ದರು. ಕೇಂದ್ರ ಸರಕಾರದ ಸೇವೆಗೆ ಮೊದಲು ದೆಹಲಿ ಕನ್ನಡ ಶಾಲೆಯಲ್ಲಿ ಇತಿಹಾಸದ (ಪಿಜಿಟಿ) ಅಧ್ಯಾಪಕರಾಗಿದ್ದರು. ನಲವತ್ತು ವರುಷಗಳಿಂದ ದೆಹಲಿಯಲ್ಲಿದ್ದ ಮುಧೋಳರು ಅಪಾರ ಬಂಧು-ಬಳಗ, ಮಿತ್ರವೃಂದವನ್ನು ಹಾಗೂ ಶಿಷ್ಯವೃಂದದವರನ್ನು ಅಗಲಿ ಪರಮಾತ್ಮನಲ್ಲಿ ಲೀನರಾದರು. ನಾನು ಅವರ ಅಕ್ಕ ಸೌ. ವಸುಂಧರಾ ಅವರ ಪತಿ ಇದ್ದು, ನಮ್ಮೊಂದಿಗೆ ತಮ್ಮ ದೆಹಲಿ ಜೀವನವನ್ನು ಕಳೆದಿದ್ದ ಮುರಲೀಧರನ ಬಗ್ಗೆ ಇಂದಿನ ಕನ್ನಡಿಗರಿಗೆ ಅವರ ಕಿರು ಪರಿಚಯವನ್ನು ಮಾಡಿಕೊಡುತ್ತಿದ್ದೇನೆ.

ಅಂದಿನ ಹೈದರಾಬಾದ ಕರ್ನಾಟಕದ, ರಾಯಚೂರು ಜಿಲ್ಲೆಯ, ಕೊಪ್ಪಳದಲ್ಲಿ ಮುರಲೀಧರರು ದಿವಂಗತ ಅಡವಿರಾವ್ ಹಾಗೂ ದಿ. ಶ್ರೀಮತಿ ಪದ್ಮಾವತಿಬಾಯಿ ಅವರಿಗೆ ದಿನಾಂಕ 15.10.1952ರಲ್ಲಿ ಪುತ್ರ ರತ್ನನಾಗಿ ಜನಿಸಿದರು. ಆಗರ್ಭ ಶ್ರೀಮಂತರಾಗಿದ್ದ ಅಡವೀರಾಯರಿಗೆ ಒಂಬತ್ತು ಜನ ಮಕ್ಕಳು. ಐದು ಜನ ಹೆಣ್ಣು ಹಾಗೂ ನಾಲ್ಕು ಜನ ಗಂಡು ಮಕ್ಕಳು. ಗಂಡು ಮಕ್ಕಳಲ್ಲಿ ಇವರೇ ಹಿರಿಯರು. ತಮ್ಮ ಪ್ರಾಥಮಿಕ ಮಾಧ್ಯಮಿಕ ವಿದ್ಯೆಯನ್ನು ಕೊಪ್ಪಳದಲ್ಲಿ ಮುಗಿಸಿ ಬಿ.ಎಸ್ಸಿ ಡಿಗ್ರಿಯನ್ನು ಗುಲ್ಬರ್ಗಾದ ಸರಕಾರಿ ಕಾಲೇಜಿನಲ್ಲಿ ಓದಿ, ಧಾರವಾಡದ ಕರ್ನಾಟಕ ಯುನಿವರ್ಸಿಟಿಯಿಂದ ಇತಿಹಾಸದ ಎಂ.ಎ. ಪದವಿಯನ್ನು ಪಡೆದರು. ನಂತರ ಬಿ.ಎಡ್. ಪದವಿಯನ್ನು ಗಳಿಸಿ, ಗುಲ್ಬರ್ಗಾದ ಹತ್ತಿರ ಹುಮ್ನಾಬಾದ ತಾಲೂಕಿನ ಮಾಣಿಕನಗರದಲ್ಲಿ ಮಾಣಿಕಪ್ರಭು ವಿದ್ಯಾ ಸಂಸ್ಥೆಯಲ್ಲಿ ಶಿಕ್ಷಕರಾಗಿ ಕಾರ್ಯ ಮಾಡಿದರು. 1978ರಲ್ಲಿ ದೆಹಲಿ ಕನ್ನಡ ಎಜ್ಯುಕೇಶನ್ ಸಂಸ್ಥೆಯವರು ಹಲವಾರು ಕನ್ನಡಿಗರನ್ನು ತಮ್ಮ ಶಾಲೆಗೆ ಶಿಕ್ಷಕರನ್ನಾಗಿ ನಿಯಮಿಸಿಕೊಂಡಿದ್ದರಿಂದ ಮುಧೋಳರು ಪಿಜಿಟಿ ಇತಿಹಾಸ ಶಿಕ್ಷಕರಾಗಿ ಬಂದರು. ನಂತರ ಅದೇ ಶಾಲೆಯಲ್ಲಿ ಜೀವಶಾಸ್ತ್ರ (ಬಯೋ)ದಲ್ಲಿ ಶಿಕ್ಷಕಿಯಾಗಿದ್ದ ಶ್ರೀಮತಿ ಪೂರ್ಣಿಮಾ ಅವರೊಂದಿಗೆ 1983ರಲ್ಲಿ ವಿವಾಹವಾಗಿ ಸಂಸಾರಸ್ಥರಾದರು.

ಮುಧೋಳ ದಂಪತಿಗಳಿಗೆ ಇಬ್ಬರು ಗಂಡು ಮಕ್ಕಳಿದ್ದಾರೆ. ಹಿರಿಯ ಮಗ ಚಿ॥ ಕಾರ್ತಿಕ ಮೆಕ್ಯಾನಿಕಲ್ ಇಂಜಿನಿಯರಿಂಗ್ ಓದಿ ಕೆಜಿಎಫ್ ಕೋಲಾರದಲ್ಲಿ ಸರಕಾರಿ ನೌಕರಿಯಲ್ಲಿದ್ದಾನೆ. ಕಿರಿಯ ಮಗ ಚಿ॥ ಶರದ್ ಬಿ.ಕಾಂ. ಡಿಗ್ರಿ ಮುಗಿಸಿ ಇದೀಗ ದೆಹಲಿಯಲ್ಲಿಯೇ ನೌಕರಿ ಮಾಡುತ್ತಿದ್ದಾನೆ. ಕಾರ್ತಿಕನ ಮದುವೆಯಾಗಿ ಒಂದು ಗಂಡು ಮಗುವಿನ ತಂದೆಯಾಗಿದ್ದಾನೆ. ಶರದ ಇನ್ನೂ ಅವಿವಾಹಿತ. ಪಟ್‌ಪರ್‌ಗಂಜಿನ ರಾಸ್ ವಿಹಾರ ಅಪಾರ್ಟ್‌ಮೆಂಟಿನಲ್ಲಿ ತಮ್ಮ ಸ್ವಗೃಹದಲ್ಲಿ ವಾಸವಾಗಿದ್ದಾರೆ.

ಕನ್ನಡ ಶಾಲೆಯಲ್ಲಿ ಇದ್ದಾಗಲೇ ಶ್ರೀಯುತರು ಬರೋಡಾ ಯುನಿವರ್ಸಿಟಿಯಿಂದ ತಮ್ಮ ಪಿ.ಎಚ್.ಡಿ. ಪದವಿಯನ್ನು ಪಡೆದರು. ನಂತರ ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ತಜ್ಞರಾಗಲು ಎಲ್‌ಎಲ್‌ಬಿ ಪರೀಕ್ಷೆಯನ್ನೂ ಪಾಸು ಮಾಡಿದರು. ಫ್ರೆಂಚ್ ಭಾಷೆಯನ್ನೂ ಅಭ್ಯಾಸಮಾಡಿ ಅದರಲ್ಲೂ ಡಿಪ್ಲೊಮಾ ಸರ್ಟಿಫಿಕೇಟು ಗಳಿಸಿದ್ದರು. ಇಷ್ಟೊಂದು ವಿದ್ಯಾವಂತರಾಗಿ ತಮ್ಮ ನೌಕರಿ ಜೀವನದೊಂದಿಗೆ ದೆಹಲಿ ಕನ್ನಡಿಗರ ಸಂಘ ಸಂಸ್ಥೆಗಳಲ್ಲಿ ಅಪಾರ ಸೇವೆ ಸಲ್ಲಿಸಿದ್ದಾರೆ. ದೆಹಲಿ ಕರ್ನಾಟಕ ಸಂಘ, ಜನಕಪುರಿ ಕನ್ನಡ ಕೂಟ, ದೆಹಲಿ ಮಧ್ವ ಸಂಘದ ಆಜೀವ ಸದಸ್ಯರು. ಶ್ರೀ ಕೃಷ್ಣಮಂದಿರ ಸ್ಥಾಪನೆಯಾಗುವಾಗ ಯಮುನಾ ನದಿಯಲ್ಲಿ ಸ್ನಾನಮಾಡಿ ಮಡಿ ಪಂಚೆಯುಟ್ಟುಕೊಂಡು ಕೊಡ ತುಂಬಾ ನೀರನ್ನು ತಂದ ಹಲವು ಭಕ್ತರಲ್ಲಿ ಇವರೂ ಒಬ್ಬರು. ಮಧ್ವ ಸಂಘದ ಸೆಕ್ರೆಟರಿಯಾಗಿಯೂ ಸೇವೆ ಸಲ್ಲಿಸಿದ್ದಾರೆ. ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧ್ಯ ಭಕ್ತರು. ಅವರ ಆರಾಧನೆಯಲ್ಲಿ ಪ್ರತಿ ವರುಷ ಮೂರೂ ದಿನಗಳಲ್ಲಿ ತಮ್ಮ ಸೇವೆ ಸಲ್ಲಿಸುತ್ತಿದ್ದರು.

ಮೊದಲು ಆಕಾಶವಾಣಿ ದೆಹಲಿ ಕೇಂದ್ರದಿಂದ ವಾರ್ತೆಗಳು ಪ್ರಸಾರವಾಗುತ್ತಿತ್ತು. ಆ ಕಾಲದಲ್ಲಿ ಇವರೂ ಕೂಡ ವಾರ್ತೆಗಳನ್ನು ಓದುತ್ತಿದ್ದರು. ಆಗ ಪ್ರಚಲಿತವಾಗಿದ್ದ "ಕನ್ನಡ ಭಾರತಿ" ಸಂಸ್ಥೆಯ ಸದಸ್ಯರಾಗಿ ಎಂ.ಎಸ್. ಸತ್ಯು, ಬಿ.ವಿ. ಕಾರಂತ, ಎಚ್.ಎಸ್. ಕುಲಕರ್ಣಿ ಹಾಗೂ ಯು. ಪ್ರಭಾಕರ ರಾವ್ ಅವರೆಲ್ಲ ನಿರ್ದೇಶಿಸಿದ ನಾಟಕಗಳಲ್ಲಿ ಪಾತ್ರ ವಹಿಸಿದ್ದರು. ಜನಕಪುರಿ ಕನ್ನಡ ಕೂಟದಿಂದ ದ.ರಾ. ಬೇಂದ್ರೆ ಅವರ 'ಜಾತ್ರೆ' ನಾಟಕದಲ್ಲಿ ಗೌಡರ ಪಾತ್ರ ವಹಿಸಿದ್ದರು. ನಾನು ಎಪಿಎಸ್ ಕನ್ನಡ ಸಂಘದ ಸದಸ್ಯರಿಂದ ನಾಟಕ ಮಾಡಿಸಿ, ಕರ್ನಾಟಕ ಸಂಘದ ಮುಖಾಂತರ ಪ್ಯಾರೇಲಾಲ್ ಭವನದಲ್ಲಿ ಅಭಿನಯಿಸಿದ ಎರಡು ನಾಟಕಗಳಿಗೆ ನಿರ್ದೇಶಕರಾಗಿದ್ದರು. ದಿನಾಲೂ ಎಚ್.ಜಿ. ದತ್ತಾತ್ರೇಯ (ಈಗ ದತ್ತಣ್ಣ)ರವರೊಂದಿಗೆ ವಾಯುದಳ ಕನ್ನಡ ಸಂಘ, ಸುಬ್ರಾತೋ ಪಾರ್ಕಿಗೆ ಬಂದು ನಮ್ಮ ರಿಹರ್ಸಲಿಗೆ ಮಾರ್ಗದರ್ಶನ ಮಾಡಿದ್ದರು. ಎಷ್ಟೋ ಬಾರಿ ಕರ್ನಾಟಕ ಸಂಘದ ವಾರ್ಷಿಕೋತ್ಸವದಲ್ಲಿ ಕ್ವಿಜ್ ಮಾಸ್ಟರ್ ಆಗಿ ಕಾರ್ಯ ಮಾಡಿದ್ದಾರೆ. ದೆಹಲಿಯಲ್ಲಿ ಚುನಾವಣಾ ಅಧಿಕಾರಿಗಳಾಗಿ ಹಲವು ಬಾರಿ ಕೆಲಸ ಮಾಡಿದ್ದಾರೆ.

ಪ್ರಾಂಶುಪಾಲರಾಗಿ ಮತ್ತು ಶಿಕ್ಷಣ ಅಧಿಕಾರಿಯಾಗಿ ಸೇವೆ ಸಲ್ಲಿಸಿದ್ದ ಮುಧೋಳರು ನೇರವಾಗಿ ಮಾತನಾಡುವ ಪ್ರವೃತ್ತಿಯವರು. ಧೈರ್ಯವಂತರು ಎಂದಿಗೂ ಸೋಲನ್ನು ಒಪ್ಪಿಕೊಳ್ಳುತ್ತಿರಲಿಲ್ಲ. ಇಂತಹ ಧೀಮಂತ ದೆಹಲಿ ಕನ್ನಡಿಗ ಶ್ರೀ ಮುರಲೀಧರ ಮುಧೋಳರವರು ನಮ್ಮನ್ನೆಲ್ಲ ಬಿಟ್ಟು ಅಗಲಿದ್ದಾರೆ. ಅವರ ಚಿರ ಆತ್ಮಕ್ಕೆ ಶಾಂತಿಯನ್ನು ನೀಡಲು ದೇವರಲ್ಲಿ ಪ್ರಾರ್ಥಿಸಿದ್ದೇವೆ.


***ಶ್ರೀಮತಿ ವಸುಂಧರಾ (ಅಕ್ಕ) ಮತ್ತು***
***ಸುಧಾಕರ ಕುರಂದವಾಡ ಪರಿವಾರ***

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರು ಮತ್ತು ದೆಹಲಿ ಕನ್ನಡ ಸೀನಿಯರ್ ಸೆಕೆಂಡರಿ ಶಾಲೆಯ ಅಧ್ಯಾಪಕರಾಗಿದ್ದ ಡಾ. ಎಂ.ಎಸ್. ಮುಧೋಳ್ ಅವರು 25.01.2019ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿ ಸಿಗಲೆಂದು ಹಾಗೂ ಅವರ ಅಗಲುವಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಆವರ ಕುಟುಂಬಕ್ಕೆ ಭಗವಂತನು ನೀಡಲೆಂದು ದೆಹಲಿ ಕನ್ನಡಿಗರ ಪರವಾಗಿ ಪ್ರಾರ್ಥಿಸುತ್ತೇವೆ.

ಅಧ್ಯಕ್ಷರು ಮತ್ತು ಕಾರ್ಯಕಾರಿ ಸಮಿತಿ ದೆಹಲಿ ಕರ್ನಾಟಕ ಸಂಘ.

"ಮೊದಲು ಆಕಾಶವಾಣಿ ದೆಹಲಿ ಕೇಂದ್ರದಿಂದ ವಾರ್ತೆಗಳು ಪ್ರಸಾರವಾಗುತ್ತಿತ್ತು. ಆ ಕಾಲದಲ್ಲಿ ಇವರೂ ಕೂಡ ವಾರ್ತೆಗಳನ್ನು ಓದುತ್ತಿದ್ದರು. ಆಗ ಪ್ರಚಲಿತವಾಗಿದ್ದ "ಕನ್ನಡ ಭಾರತಿ" ಸಂಸ್ಥೆಯ ಸದಸ್ಯರಾಗಿ ಎಂ.ಎಸ್. ಸತ್ಯು, ಬಿ.ವಿ. ಕಾರಂತ, ಎಚ್.ಎಸ್. ಕುಲಕರ್ಣಿ ಹಾಗೂ ಯು. ಪ್ರಭಾಕರ ರಾವ್ ಅವರೆಲ್ಲ ನಿರ್ದೇಶಿಸಿದ ನಾಟಕಗಳಲ್ಲಿ ಪಾತ್ರ ವಹಿಸಿದ್ದರು."

# ಮರೆಯಾದ ಧೀಮಂತ ನಾಯಕ
# ಜಾರ್ಜ್ ಫರ್ನಾಂಡಿಸ್



ಮಾಜಿ ಸಚಿವ ಜಾರ್ಜ್ ಫರ್ನಾಂಡಿಸ ದೆಹಲಿಯಲ್ಲಿ ನಿಧನರಾಗಿದ್ದಾರೆ. ದೀರ್ಘ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಫರ್ನಾಂಡಿಸ್ ಅವರಿಗೆ 88 ವರ್ಷ ವಯಸ್ಸಾಗಿತ್ತು. ಮೂಲತಃ ಮಂಗಳೂರಿನವರಾದ ಜಾರ್ಜ್ ಫರ್ನಾಂಡಿಸ್, 1930 ಜೂನ್ 3ರಂದು ಜನಿಸಿದ್ದರು. ಮಂಗಳೂರಿನ ಸಂತ ಅಲೋಸಿಯಸ್ ಕಾಲೇಜಿನಲ್ಲಿ ತಮ್ಮ ವಿದ್ಯಾಭ್ಯಾಸ ಮುಗಿಸಿದ್ದರು.

ಜಾರ್ಜ್ ಫರ್ನಾಂಡಿಸರು ತಮ್ಮದೇ ಸಮತಾ ಪಕ್ಷ ಆರಂಭಿಸಿದ್ದರು. ಬಿಹಾರದಿಂದ ರಾಜ್ಯಸಭೆಗೆ ಪ್ರತಿನಿಧಿಸುತ್ತಿದ್ದ ಜಾರ್ಜ್ ಫರ್ನಾಂಡಿಸರು ವಾಜಪೇಯಿ ಸರಕಾರದಲ್ಲಿ ರಕ್ಷಣಾ ಸಚಿವರಾಗಿದ್ದರು. ವಿ.ವಿ. ಸಿಂಗ್ ಸರಕಾರದಲ್ಲಿ ರೈಲ್ವೆ ಸಚಿವರಾಗಿದ್ದರು. ಕೇಂದ್ರ ರೈಲ್ವೇ ಸಚಿವರಾಗಿದ್ದ ಸಮಯದಲ್ಲಿ ಜಾರ್ಜ್ ಫರ್ನಾಂಡಿಸ್ ಮಂಗಳೂರಿನ ತೊಕ್ಕೊಟ್ಟುವಿನಿಂದ ಮಹಾರಾಷ್ಟ್ರದ ರತ್ನಗಿರಿವರೆಗೆ ರೈಲ್ವೇ ಮಾರ್ಗ ನಿರ್ಮಾಣ ಮಾಡಿದ್ದರು.

ದೇಶದ ರಕ್ಷಣಾ ಸಚಿವ ಸ್ಥಾನದಂಥ ಹುದ್ದೆಯನ್ನು ಏರಿದ್ದರೂ ಅವರು ನಿರ್ವಹಿಸಿದ ಜೀವನ ಮಾತ್ರ ಸರಳ. ಮಂಗಳೂರಿನ ಸಾಮಾನ್ಯ ಕುಟುಂಬದಲ್ಲಿ ಜನಿಸಿದ ಅವರು, ಮುಂಬಯಿಯ ವ್ಯವಸ್ಥೆಯನ್ನು ನಿಯಂತ್ರಿಸುವ ಮಟ್ಟಕ್ಕೆ ಬೆಳೆದಿದ್ದು ಮತ್ತು ಕಾರ್ಮಿಕರಿಗೆ ಸೂಕ್ತ ಭದ್ರತೆ ನೀಡಲು ನಡೆಸಿದ ಹೋರಾಟ ಅವಿಸ್ಮರಣೀಯ. ಅವರು ಕೃಷಿಕ, ಕಾರ್ಮಿಕ ಸಂಘಟನೆಗಳ ಪರ ಹೋರಾಟಗಾರ, ಪತ್ರಕರ್ತ, ರಾಜಕಾರಣಿ.

ಜಾನ್ ಜೋಸೆಫ್ ಫರ್ನಾಂಡಿಸ್ ಮತ್ತು ಅಲೀಸ್ ಮಾರ್ತಾ ಫರ್ನಾಂಡಿಸ್ ದಂಪತಿಯ ಹಿರಿಯ ಪುತ್ರನಾಗಿ ಜನಿಸಿದ್ದರು. ಕಿಂಗ್ ಐದನೇ ಜಾರ್ಜ್ ಹುಟ್ಟಿದ್ದೂ ಅದೇ ದಿನ. ಅವರ ತಾಯಿ ಕಿಂಗ್ ಐದನೇ ಜಾರ್ಜ್‌ರ ತತ್ವಾದರ್ಶಗಳನ್ನು ಗೌರವಿಸುತ್ತಿದ್ದರು. ಜಾರ್ಜ್ ನ್ಯಾಯವಾದಿಯಾಗಬೇಕು ಎನ್ನುವುದು ತಂದೆ ಆಶಯವಾಗಿತ್ತು. ರೋಮನ್ ಕ್ಯಾಥೊಲಿಕ್ ಪಂಗಡದ ಜಾರ್ಜ್ ಧರ್ಮಗುರು ಆಗಬೇಕು ಎಂದು ಕುಟುಂಬ ಸದಸ್ಯರು ಒತ್ತಾಸೆ ವ್ಯಕ್ತಪಡಿಸಿದ್ದರಿಂದ 1946ರಲ್ಲಿ ಬೆಂಗಳೂರಿನಲ್ಲಿರುವ "ಸೈಂಟ್ ಪೀಟರ್ಸ್' ಸೆಮಿನರಿಯಲ್ಲಿ ಸೇರಿಕೊಂಡರು. ಮೂರು ವರ್ಷಗಳ ಕಾಲ ಅಲ್ಲಿ ಅಧ್ಯಯನ ನಡೆಸಿದ ಬಳಿಕ ತಾತ್ವಿಕ ಭಿನ್ನಾಭಿಪ್ರಾಯಗಳಿಂದ ಹೊರ ಬಂದರು.

ಬಾಂಬೆ ಮುನಿಸಿಪಲ್ ಕಾರ್ಪೊರೇಷನ್ ಸದಸ್ಯರಾಗಿ 1961ರಿಂದ 1968ರ ವರೆಗೆ ಸೇವೆ ಸಲ್ಲಿಸಿದ್ದರು. ಅವರಿಗೆ ಹೆಸರು ತಂದುಕೊಟ್ಟದ್ದು 1974ರ ರೈಲ್ವೆ ಮುಷ್ಕರ. ರೈಲ್ವೆ ಕೆಲಸಗಾರರಿಗೆ ಸರಿಯಾದ ರೀತಿಯಲ್ಲಿ ಸಂಬಳ ಪಾವತಿಯಾಗುತ್ತಿಲ್ಲ ಎಂಬ ಕಾರಣಕ್ಕಾಗಿ ಮುಷ್ಕರ ನಡೆಸಿದ್ದರು. ದೇಶಾದ್ಯಂತ ಪ್ರತಿಭಟನೆಗಳು ನಡೆದವು. ಬೆಂಗಳೂರಿನಲ್ಲಿ ಕಲಿಯುವಾಗ ಉಂಟಾದ ಅನುಭವವೇ ಅವರನ್ನು ಮುಂಬೈಗೆ ಕರೆ ತಂದಿತು.

ಈ ಪ್ರತಿಭಟನೆಯೇ ಪ್ರಧಾನಿಯಾಗಿದ್ದ ಇಂದಿರಾ ಗಾಂಧಿಯವರು 1975ರಲ್ಲಿ ತುರ್ತು ಪರಿಸ್ಥಿತಿ ಜಾರಿಗೊಳಿಸಲು ಕಾರಣವಾಯಿತು. ಜಾರ್ಜ್ ಭೂಗತರಾಗಿಯೇ ಇಂದಿರಾ ಗಾಂಧಿ ಸರ್ಕಾರದ ವಿರುದ್ಧ ಹೋರಾಟ ನಡೆಸಿದ್ದರು. ಅವರನ್ನು 1976 ಜೂ. 10ರಂದು ಕೋಲ್ಕತಾದಲ್ಲಿ ಬಂಧಿಸಲಾಯಿತು. ಕೈಗಳಿಗೆ ಕಟ್ಟಿದ್ದ ಸಂಕೋಲೆಯನ್ನು ಎತ್ತಿಹಿಡಿದ ಕಪ್ಪು ಬಿಳುಪಿನ ಫೋಟೋ ಈಗಲೂ ಇತಿಹಾಸದ ಪುಟಗಳಲ್ಲಿ ದಾಖಲಾಗಿದೆ. ತುರ್ತು ಪರಿಸ್ಥಿತಿ ಹಿಂಪಡೆದ ಸಂದರ್ಭದಲ್ಲಿಯೇ 1977ರ ಜನವರಿಯಲ್ಲಿ ನಡೆದಿದ್ದ ಚುನಾವಣೆಯಲ್ಲಿ ಜೈಲಿಂದಲೇ ಸ್ಪರ್ಧಿಸಿ, ಬಿಹಾರದ ಮುಜಾಫರ್‌ಪುರದಿಂದ ಗೆದ್ದಿದ್ದರು. ನಂತರ ಮೊರಾರ್ಜಿ ದೇಸಾಯಿ ನೇತೃತ್ವದ ಸರ್ಕಾರದಲ್ಲಿ ಸಚಿವರೂ ಆಗಿದ್ದರು.

ದೇಶದ ಮೊತ್ತಮೊದಲ ಕಾಂಗ್ರೆಸ್ಸೇತರ ಸರ್ಕಾರ ರಚಿಸುವಲ್ಲಿ ಜಾರ್ಜ್ ಭೂಮಿಕೆ ಅಪಾರ. ಆರಂಭದಲ್ಲಿ ಸಂಯುಕ್ತ ಸೋಶಿಯಲಿಸ್ಟ್ ಪಕ್ಷದ ಮೂಲಕ ರಾಜಕೀಯ ಪ್ರವೇಶ ಮಾಡಿದ ಜಾರ್ಜ್ 1988ರಲ್ಲಿ ಜನತಾ ದಳಕ್ಕೆ ಸೇರ್ಪಡೆಯಾದರು. ನಂತರ ವಿ.ಪಿ. ಸಿಂಗ್ ನೇತೃತ್ವದ ಸರ್ಕಾರದಲ್ಲಿ ರೈಲ್ವೆ ಸಚಿವರಾಗಿ ಮಂಗಳೂರು ಮುಂಬೈ ಬೆಸೆಯುವ ಕೊಂಕಣ ರೈಲು ಯೋಜನೆ ಜಾರಿ ಮಾಡುವಲ್ಲಿ ಯಶಸ್ವಿಯಾದರು.

ಅಗಲಿದ ಧೀಮಂತ ನಾಯಕ ಜಾರ್ಜ್ ಫರ್ನಾಂಡಿಸ್ ಅವರಿಗೆ ದೆಹಲಿ ಕರ್ನಾಟಕ ಸಂಘವು ನಮನಗಳನ್ನು ಸಲ್ಲಿಸುತ್ತದೆ. ■

ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

SAUJANYA
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Delhi Karnataka Sangha'sAbhimatha Monthly,
Feb-2019, Vol. No.29, Issue No.5, Price Rs.1/-
RNI Regn. No. 53405/91, DL-SW-1/4016/19-21
Date of Publication : Feb 8th / 9th, Posting Date :10th / 11th, Total Pages-20
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022,
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

